ಬೆಳಗಾವಿ ಜಿಲ್ಲೆ
ವಸತಿಶಾಲೆಗಳ ವಿವರ

SL	CAT	MODEL	SCH	TYPE	SCHOOL NAME	TALUK
1	BC	MDRS(B)	211-	OWN	HIDKAL DAM	HUKKERI
2	SC	MDRS(Co)	212-	OWN	BAILAHONGAL	BAILAHONGALA
3	GEN	MDRS(Co)	213-	OWN	SANKESHWARA	HUKKERI
4	SC	MDRS(Co)	214-	OWN	MURAGUNDI	ATHANI
5	SC	MDRS(Co)	215-	OWN	NIDASOSHI	HUKKERI
6	SC	MDRS(Co)	216-	OWN	YALLAMMANAGUDDA	SAVADATTI
7	STE	EMRS(Co)	217-	OWN	TAVAGA	GOKAK
8	BC	HRS(Co)	219-	OWN	NANDAGADA	KHANAPURA
9	BC	MDRS(Co)	220-	OWN	YAKSAMBA	CHIKKODI
10	BC	MDRS(Co)	221-	OWN	SADALAGA	CHIKKODI
11	BC	MDRS(Co)	222-	OWN	MALLAPUR P G	GOKAK
12	BC	MDRS(Co)	223-	OWN	HOSURU	HUKKERI
13	BC	MDRS(Co)	224-	OWN	YADAWADA	GOKAK
14	SC	MDRS(Co)	225-	OWN	KOUJALAGI	GOKAK
15	SC	MDRS(Co)	226-	OWN	MAJALATTI	CHIKKODI
16	ST	MDRS(Co)	227-	OWN	RAJANAKATTI	GOKAK
17	SC	MDRS(Co)	228-	OWN	KATAKOLA	RAMDURGA
18	SC	MDRS(Co)	229-	OWN	ALAGAWADI	RAIBAG
19	SC	MDRS(Co)	230-	OWN	NAGANUR	GOKAK
20	BC	MDRS(Co)	231-	OWN	KALLOLI	GOKAK
21	BC	MDRS(Co)	232-	OWN	HIRENANDI	GOKAK
22	SC	MDRS(Co)	233-	OWN	SANTIBASTAWAD	BELAGAVI
23	SC	MDRS(U)	234-	OWN	KUDACHI (SUTTATI)	RAIBAG
24	ST	MDRS(Co)	235-	OWN	HALABHAVI	BELAGAVI
25	BC	MDRS(Co)	236-	OWN	GAVAN	CHIKKODI
26	BC	MDRS(Co)	237-	OWN	MADABAVI	ATHANI
27	BC	MDRS(Co)	238-	OWN	VAKKUNDA	BAILAHONGALA

28	SC	KRCRS(G)	442-	OWN	SANKONATTI (CHAMAKERI MADDI)	ATHANI
29	SC	KRCRS(G)	443-	OWN	NAGARAL	RAIBAG
30	SC	KRCRS(G)	444-	OWN	BAILAHONGAL	BAILAHONGALA
31	SC	KRCRS(G)	445-	OWN	SALAHALLI	RAMDURGA
32	ST	KRCRS(G)	446-	OWN	KHANAGAV	GOKAK
33	ST	KRCRS(G)	447-	OWN	K SHIVAPURA	SAVADATTI
34	ST	KRCRS(G)	448-	OWN	KYARAGUDDA	HUKKERI
35	SC	MDRS(Co)	551-	RENT	MADABHAVI	ATHANI
36	BC	IGRS(Co)	552-	RENT FREE	TUMMARAGUDDI	BELAGAVI
37	ST	MDRS(Co)	553-	RENT	PATTANAKUDI	CHIKKODI
38	SC	MDRS(Co)	554-	RENT FREE	MANTUR	RAIBAG
39	SC	IGRS(Co)	555-	RENT	BATAKURKI (KATAKOL)	RAMDURGA
40	SC	ABVRS(Co)	594-	RENT	TAPASI	GOKAK
41	BC	ABVRS(Co)	606-	RENT	KADAKALAT (NIPPANI)	CHIKKODI
42	ST	KRCRS(G)	686-	RENT	HANCHINAL	CHIKKODI
43	SC	KRCRS(G)	687-	RENT	KAPPALAGUDDI	RAIBAG
44	ST	KRCRS(G)	689-	TAGGED	MUNAVALLI (YALLAMMAGUDDA)	SAVADATTI
45	SC	KRCRS(G)	691-	RENT	JAMBOTI (BEKWAD CROSS)	KHANAPURA
46	SC	DBRARS(Co	)784-	RENT FREE	TELASANGA	ATHANI
47	SC	DBRARS(G)	785-	RENT FREE	ARABHAVI	GOKAK
48	ST	DBRARS(Co	)786-	RENT	GODACHINAMALKI	GOKAK
49	SC	DBRARS(G)	787-	RENT	SHIRAGAVI	CHIKKODI
50	SC	DBRARS(Co	)788-	RENT	NESARAGI	BAILAHONGALA
51	SC	DBRARS(Co	)789-	RENT	KAKATI	BELAGAVI
52	ST	DBRARS(G)	790-	RENT	SUREBAN (KATAKOL)	RAMDURGA
53	SC	DBRARS(Co	)791-	RENT	BEEDI	KHANAPURA
54	BC	MDRPU(Co)	920-	OWN	NIDASOSHI	HUKKERI

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಹಿಡಕಲ್–ಡ್ಯಾಂ, ತಾ॥ ಹುಕ್ಕೇರಿ, ಜಿ॥ ಬೆಳಗಾವಿ –591107

ಮಂಜೂರಾದ ವರ್ಷ	1993
ಶೈಕ್ಷಣಿಕ ಕಾರ್ಯಾರಂಭ ವರ್ಷ	1993–94
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	15.71–74.35
ನಿವೇಶನದ ವಿಸ್ತೀರ್ಣತೆ	19.20 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಹಸಿರು ಹಂದರದ ನಡುವೆ ಘಟಪ್ರಭೆ ಮಡಿಲಲ್ಲಿ ಪರ್ವತ ಶಿಖರದಂತೆ ಕಂಗೊಳಿಸುತ್ತಾ, ಸಾವಿರಾರು ಬಡ ಪ್ರತಿಭೆಗಳನ್ನು ಹೃದಯ ಸ್ಪರ್ಶಿ ಆಕರ್ಷಣೆ ಮಾಡುತ್ತಾ ಸದಾ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ರಾಜ್ಯ ಮಟ್ಟದ ಸಾಧನೆ ಗೈಯುತ್ತಿರುವ ನಮ್ಮ ಹೆಮ್ಮೆಯ ವಸತಿ ಶಾಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಿಡಕಲ್–ಡ್ಯಾಂ ಬಿ.ಸಿ.211 ತಾ/ಹುಕ್ಕೇರಿ ಬೆಳಗಾವಿ.

ಸನ್–1999–2000 ಸಾಲಿನಿಂದ ಸನ್ 2018–19ರವರಗೆ ಎಸ್.ಎಸ್.ಎಲ.ಸಿಯಲ್ಲಿ ಶೇ.100 ರಷ್ಟು ಫಲಿತಾಂಶ ತಂದದ್ದು ನಮ್ಮ ಶಾಲೆ. ಹಲವು ಬಾರಿ ರಾಜ್ಯ ಮಟ್ಟಕ್ಕೆ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಪ್ರಥಮ ಸ್ಥಾನ ಗಳಿಸಿದ್ದು, ಸನ್2018–19ರಲ್ಲಿ 625ಕ್ಕೆ 621 ಅಂಕಗಳನ್ನು ನಮ್ಮ ಶಾಲೆ ವಿದ್ಯಾರ್ಥಿ ಪಡೆದುಕೊಂಡು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. ನೂರಾರು ಪ್ರತಿಭೆಗಳನ್ನು ಹುಟ್ಟು ಹಾಕಿದ ನಮ್ಮ ಶಾಲೆ ಹಳೆಯ ವಿದ್ಯಾರ್ಥಿಗಳು ಅತ್ಯುನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಮಗೆ ಹೆಮ್ಮೆಯೆನಿಸುತ್ತದೆ.

ಅರುಣೋದಯದಿಂದ ಪ್ರಾರಂಭವಾಗುವ ನಮ್ಮ ಶಾಲೆಯ ದಿನನಿತ್ಯದ ಚಟುವಟಿಕೆ ಯೋಗದಿಂದ ಪ್ರಾರಂಬವಾಗುತ್ತದೆ. ಪ್ರಾತ:ಕಾಲದಲ್ಲಿ ವರ್ಗಗಳು ಪ್ರಾರಂಬಗೊಂಡು ರಾತ್ರಿ 8.00ಗಂಟೆಯವರೆಗೆ ನಿರಂತರವಾದ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ನಡೆಯುತ್ತವೆ.ವಿಶಾಲವಾದ ಆಟದ ಮೈದಾನ ಸುಂದರವಾದ ರಂಗಮಂದಿರ ನೀಲಗಿರಿ ಬೆಟ್ಟದಂತೆ ಕಂಗೊಳಿಸುವ ಶಾಲಾ ಆವರಣದಲ್ಲಿಯ ಗಿಡಮರಗಳು ಎಲ್ಲರನ್ನು ಮಂತ್ರ ಮುಗ್ದರನ್ನಾಗಿಸುತ್ತದೆ. ಜನ ದಟ್ಟನೆ ಮತ್ತು ಶಬ್ಧ ಮಾಲಿನ್ಯದಿಂದ ಸುರಂಕ್ಷಿತವಾದ ನಮ್ಮ ಶಾಲೆ ಪರಿಸರ ಪ್ರೇಮಿಗಳನ್ನು ಆಕರ್ಷಿಸಿದೆ ಇರಲಾರದು. ಕುಡಿಯಲು ಶುದ್ದವಾದ ಘಟಪ್ರಭೆಯ ತೀರ್ಥ, ರುಚಿಕಟ್ಟಾದ ಆಹಾರ ಜ್ಞಾನ ದಾಹವನ್ನು ಹಿಂಗಿಸುವ ನಮ್ಮ ಜ್ಞಾನ ದೇಗುಲ ಹೆಮ್ಮೆಯಿಂದ ತಲೆಯೆತ್ತಿ, ತಾಲ್ಲೂಕು,ಜಿಲ್ಲೆ ಮತ್ತು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಬೈಲಹೊಂಗಲ. (ಎಸ್.ಸಿ), ತಾ॥ ಬೈಲಹೊಂಗಲ. ಜಿ॥ ಬೆಳಗಾವಿ. – 591102

ಮಂಜೂರಾದ ವರ್ಷ	1992
ಶೈಕ್ಷಣಿಕ ಕಾರ್ಯಾರಂಭ ವರ್ಷ	1993–94
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	15.81–74.85
ನಿವೇಶನದ ವಿಸ್ತೀರ್ಣತೆ	12.33 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

'ಪ್ರತಿಭೆಗೆ ಪುರಸ್ಕಾರ' ಎಂಬ ಧ್ಯೇಯ ವಾಕ್ಯದೊಂದಿಗೆ ಕಿತ್ತೂರ ರಾಣಿ ಚೆನ್ನಮ್ಮ, ಶೂರ ಸಂಗೋಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮ ಹಾಗೂ ಇನ್ನು ಅನೇಕ ಕೆಚ್ಚೆದೆಯ ಹೋರಾಟಗಾರರು ಹುಟ್ಟಿದ 'ಗಂಡು ಮೆಟ್ಟಿನ ನಾಡು' ಎಂದೇ ಪ್ರಖ್ಯಾತಿ ಹೊಂದಿದ ಪುಣ್ಯಭೂಮಿ ಬೈಲಹೊಂಗಲ ತಾಲ್ಲೂಕಿನ ಬೈಲಹೊಂಗಲ ಪಟ್ಟಣದಿಂದ 4 ಕಿ.ಮೀ ದೂರದಲ್ಲಿನ ಪ್ರಕೃತಿಯ ಮಡಿಲಲ್ಲಿ ನಿರ್ಮಾಣಗೊಂಡಿರುವ ಶಾಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ. ಬೈಲಹೊಂಗಲ ಜಿ:ಬೆಳಗಾವಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ. ಬೈಲಹೊಂಗಲ ಪಟ್ಟಣದ ವ್ಯಾಪ್ತಿಯಲ್ಲಿ ಸುಮಾರು 12 ಎಕರೆ ಭೂಭಾಗವನ್ನು ಹೊಂದಿದೆ, ನಮ್ಮ ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕೇಂದ್ರ ಸರಕಾರದ ಜವಾಹರ ನವೋದಯ ವಿದ್ಯಾಲಯಗಳ ಮಾದರಿಯಲ್ಲಿಯೇ ರಾಜ್ಯ ಸರಕಾರದ ಪಠ್ಯಕ್ರಮದೊಂದಿಗೆ ನವೋದಯ ಮಾದರಿ ವಸತಿ ಶಾಲೆಗಳು 1992–93 ನೇ ಸಾಲಿನಲ್ಲಿ ಆರಂಭಗೊಂಡಂತಹ ಶಾಲೆಗಳಲ್ಲಿ ಈ ಶಾಲೆಯೂ ಒಂದು.

1993–94ನೇ ಸಾಲಿನಿಂದ ಇಲ್ಲಿಯವರೆಗ ಬೇರೆ ಬೇರೆ ಊರು, ತಾಲ್ಲೂಕು, ಜಿಲ್ಲೆಗಳಿಂದ ವಿವಿಧ ಜಾತಿ, ಧರ್ಮ ಪ್ರದೇಶಗಳಿಂದ ಬಂದಂತಹ ಸುಮಾರು 1500 ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ದಾರಿ ದೀಪವಾಗಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ ಈ ಶಾಲೆ.

ಈ ಶಾಲೆ ಆರಂಭವಾದಾಗಿನಿಂದಲೂ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಉತ್ತಮ ಕ್ರೀಡಾ ಪಟುಗಳನ್ನು ತಯಾರು ಮಾಡುವದರ ಜೊತೆಗೆ ವರ್ಷದಿಂದ ವರ್ಷಕ್ಕೆ ಪ್ರಗತಿ ಕಾಣುತ್ತ ಬಂದಂತಹ ಶಾಲೆ. ಇದಕ್ಕೆ ಸಾಕ್ಷಿ ಎಂಬಂತೆ ಸುಮಾರು 1500 ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ್ದು, ಇದರಲ್ಲಿ ಒಟ್ಟು (1999 ರಿಂದ 2019ರ ವರೆಗಿನ) ಎಸ್.ಎಸ್.ಎಲ್.ಸಿ ಫಲಿತಾಂಶ ಸರಾಸರಿ 96.24% ಬಂದಿದೆ, ಅಲ್ಲದೇ ಕ್ರೀಡೆಯಲ್ಲಿ ಹಾಗೂ ಸಾಂಸ್ಕೃತಿಯ ಸಾಧನೆಯಲ್ಲಿ ರಾಜ್ಯ ಮಟ್ಟಕ್ಕೆ ಸುಮಾರು 82 ವಿದ್ಯಾರ್ಥಿಗಳು ಪ್ರತಿನಿಧಿಸಿ ಪ್ರಶಸ್ತಿ ಪಡೆದ್ದಿದ್ದು, ಜಿಲ್ಲಾ ಮಟ್ಟಕ್ಕೆ ಸುಮಾರ 63 ವಿದ್ಯಾರ್ಥಿಗಳು ಪ್ರತಿನಿದಿಸಿದ್ದಾರೆ.

ಸಿಬ್ಬಂದಿ ವರ್ಗದವರಿಗೆ ಹಾಗೂ ವಿದ್ಯಾರ್ಥಿಗಳಿಗೆ ನಿರಂತರಗಾಗಿ ಮಾರ್ಗದರ್ಶನ ನೀಡುತ್ತ ಬಂದಿರುವ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿ ವರ್ಗದೊಂದಿಗೆ ಸಮಾಜದ ಹಿಂದುಳಿದ, ದೀನ ದಲಿತರ ಏಳ್ಗೆಯಲ್ಲಿ ಸದಾ ಪ್ರಯತ್ನಶೀಲವಾಗಿದೆ ಈ ಶಾಲೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಸಂಕೇಶ್ವರ, ಸಂಕೇಶ್ವರ ಹೋಬಳಿ, ಹರಗಾಪೂರ ಗಡ ಪೋಸ್ಟ್, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ – 591313

ಮಂಜೂರಾದ ವರ್ಷ	1995–96
ಶೈಕ್ಷಣಿಕ ಕಾರ್ಯಾರಂಭ ವರ್ಷ	1995–96
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	9.0 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ನಮ್ಮ ವಸತಿ ಶಾಲೆಯು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರ ಹೋಬಳಿಯ ಹರಗಾಪೂರ ಗಡ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇರುವ 9.0 ಎಕರೆ ವಿಸ್ತೀರ್ಣದಲ್ಲಿ ಮರಗಳಿಂದ ತಂಪಾದ ಪ್ರಕೃತಿಯ ಮಡಿಲಲ್ಲಿ ಆವರಿಸಿ, ಕಣ್ಮನ ಸೆಳೆಯುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸಂಕೇಶ್ವರ (ಸಾಮಾನ್ಯ–213)

ನಮ್ಮ ವಸತಿ ಶಾಲೆಗೆ ಹತ್ತಿರದಲ್ಲಿರುವ ಛತ್ರಪಡಿ ಶಿವಾಜಿ ಮಹಾರಾಜರ ಐತಿಹಾಸಿಕ ವಲ್ಲಭಗಡ ಕೋಟೆ ಇದ್ದು ಸುಮಾರು 500 ಮೀ. ದೂರದಲ್ಲಿ ಓಖಿ–4 ಪುಣಾ–ಬೆಂಗಳೂರು ನ್ಯಾಷನಲ್ ಹೈವೆಯನ್ನು ಇರುತ್ತದೆ. ಹಾಗೂ 2 ಕಿ.ಮೀ. ದೂರದಲ್ಲಿ ಹಿರಣ್ಯಕೇಶಿ ನದಿಯನ್ನು ಹರಿಯುತ್ತದೆ. ಅದೇ ರೀತಿ ನಮ್ಮ ವಸತಿ ಶಾಲೆಯ ಅವರಣದಲ್ಲಿ ಗಣೇಶ ಗುಡಿಯನ್ನು ಸ್ಥಾಪನೆ ಮಾಡಲಾಗಿದೆ.

ರಾಜ್ಯಾದ್ಯಂತ ವಿಶೇಷ ಕಾರಣಗಳಿಂದ ಹೆಸರುವಾಸಿಯಾಗಿರುವ ನಮ್ಮ ವಸತಿ ಶಾಲೆಯು ಪ್ರತಿ ವರ್ಷವೂ ಜಾತಿ ಮತ ಧರ್ಮಗಳ ಬೇಧವಿಲ್ಲದೆ ತನ್ನಡೆ ಪ್ರತಿಭಾನ್ವಿತ ಮಕ್ಕಳನ್ನು ಆಕರ್ಷಿಸಿ ಅವರ ಭವಿಷ್ಯದ ಬುನಾದಿ ಒದಗಿಸುವ ಕೆಲಸವನ್ನು ನಿರ್ವಹಿಸುತ್ತಿದೆ.

ಈ ವಸತಿ ಶಾಲೆ ಈಗ 25 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು ಕಳೆದ 17 ವರ್ಷಗಳಲ್ಲಿ ನಡೆದ ಎಸ್.ಎಸ್,ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ನಮ್ಮ ವಸತಿ ಶಾಲೆಯು ಪ್ರತಿ ವರ್ಷ ಶೇಕಡಾ 100% ರಷ್ಟು ಫಲಿತಾಂಶ ಪಡೆಯುತ್ತಾ ಬಂದಿದೆ. ಜಿಲ್ಲೆಯಲ್ಲಿ ಹಾಗೂ ರಾಜ್ಯದ 10 ಅತ್ಯುತ್ತಮ ಶಾಲೆಗಳ ಪಟ್ಟಿಯಲ್ಲಿ ನಮ್ಮ ಶಾಲೆಯು ಇರುವುದು ನಮ್ಮಲ್ಲೆರಗೂ ಹೆಮ್ಮೆಯ ವಿಷಯವಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮುರಗುಂಡಿ, ತಾಲ್ಲೂಕ॥ ಅಥಣಿ, ಜಿಲ್ಲಾ॥ ಬೆಳಗಾವಿ,ಪಿನ.ನಂ–591304

ಮಂಜೂರಾದ ವರ್ಷ	1996–1997
ಶೈಕ್ಷಣಿಕ ಕಾರ್ಯಾರಂಭ ವರ್ಷ	1997–98
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.7397–74.9870
ನಿವೇಶನದ ವಿಸ್ತೀರ್ಣತೆ	20 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರವಾದ ಮುರಗುಂಡಿಯ ಪತ್ರಿವನ ಪಕ್ಕದಲ್ಲಿರುವ ಶಾಂತವಾದ ಹಾಗೂ ಸುಂದರವಾದ ಸ್ಥಳದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮುರಗುಂಡಿ (214 ಎಸ್.ಸಿ) ಶಾಲೆಯು ತಾಲ್ಲೂಕಾ ಅಥಣಿಯಿಂದ 8 ಕೀ.ಮೀಟರ ಅಂತರದಲ್ಲಿರುವ ಮುರಗುಂಡಿ ಗ್ರಾಮದಲ್ಲಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮುರಗುಂಡಿ ಹೋಬಳಿಯಲ್ಲಿದೆ. 20 ಎಕರೆ ಆವರಣವನ್ನು ಹೊಂದಿರುವ ಶಾಲೆಯು ಗ್ರಾಮೀಣ ಭಾಗದ ಪ್ರತಿಭಾವಂತ ಬಡ ಮಕ್ಕಳಿಗೆ ಉತ್ತಮ ಗುಣ ಮಟ್ಟದ ಶಿಕ್ಷಣವನ್ನು ನೀಡುವ ಶಾಲೆಯಾಗಿದೆ. ಶಾಲೆಯಲ್ಲಿ ವಿಶಾಲವಾದ ಆಟದ ಮೈದಾನ, ಜಿಮ್ಮ ವ್ಯವಸ್ಥೆ ಕಂಪ್ಯೂಟರ ಶಿಕ್ಷಣ ಕೊಠಡಿ, ಮತ್ತು ಸ್ಮಾರ್ಟಕ್ಲಾಸ್ ವ್ಯವಸ್ಥೆ ಹೊಂದಿರುವ ವರ್ಗ ಕೋಣೆಗಳು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿವೆ.

ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 13 ಜನ ಸಿಬ್ಬಂದಿಗಳಲ್ಲಿ 9 ಜನ ಬೋಧಕ ಹಾಗೂ 3 ಬೋಧಕೇತರ ಸಿಬ್ಬಂದಿಗಳು ಇದ್ದು ಮಕ್ಕಳ ಸರ್ವಾಂಗೀನ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.ಇಲ್ಲಿಯವರೆಗೆ ವಸತಿ ಶಾಲೆಯಿಂದ 18 ಎಸ್.ಎಸ್.ಎಲ್.ಸಿ ಬ್ಯಾಚಗಳು ಮುಗಿದಿದ್ದು ಅದರಲ್ಲಿ ಬಹುತಾಂಶ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ ಹಾಗೂ ಕೆಲವು ಜನ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ನಿಡಸೋಸಿ, ತಾಲ್ಲೂಕ॥ ಹುಕ್ಕೇರಿ, ಜಿಲ್ಲಾ॥ ಬೆಳಗಾವಿ,ಪಿನ.ನಂ–591236.

ಮಂಜೂರಾದ ವರ್ಷ	1996–1997
ಶೈಕ್ಷಣಿಕ ಕಾರ್ಯಾರಂಭ ವರ್ಷ	1997–98
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.30–74.52
ನಿವೇಶನದ ವಿಸ್ತೀರ್ಣತೆ	14.5 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರವಾದ ನಿಡಸೋಸಿಯ ಪತ್ರಿವನ ಪಕ್ಕದಲ್ಲಿರುವ ಶಾಂತವಾದ ಹಾಗೂ ಸುಂದರವಾದ ಸ್ಥಳದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿಡಸೋಸಿ (215 ಎಸ್.ಸಿ) ಶಾಲೆಯು ತಾಲ್ಲೂಕಾ ಹುಕ್ಕೇರಿಯಿಂದ 15 ಕೀ.ಮೀಟರ ಅಂತರದಲ್ಲಿರುವ ನಿಡಸೋಸಿ ಗ್ರಾಮದಲ್ಲಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಹೋಬಳಿಯಿಂದ 10 ಕೀ. ಮೀಟರ ಅಂತರದಲ್ಲಿದ್ದು, 14.5 ಎಕರೆ ಆವರಣವನ್ನು ಹೊಂದಿರುವ ಶಾಲೆಯು ಗ್ರಾಮೀಣ ಭಾಗದ ಪ್ರತಿಭಾವಂತ ಬಡ ಮಕ್ಕಳಿಗೆ ಉತ್ತಮ ಗುಣ ಮಟ್ಟದ ಶಿಕ್ಷಣವನ್ನು ನೀಡುವ ಶಾಲೆಯಾಗಿದೆ. ಶಾಲೆಯಲ್ಲಿ ವಿಶಾಲವಾದ ಆಟದ ಮೈದಾನ, ಜಿಮ್ಮ ವ್ಯವಸ್ಥೆ ಕಂಪ್ಯೂಟರ ಶಿಕ್ಷಣ ಕೊಠಡಿ, ಮತ್ತು ಸ್ಮಾರ್ಟಕ್ಲಾಸ್ ವ್ಯವಸ್ಥೆ ಹೊಂದಿರುವ ವರ್ಗ ಕೋಣೆಗಳು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿವೆ.

ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 11 ಜನ ಸಿಬ್ಬಂದಿಗಳಲ್ಲಿ 8 ಜನ ಬೋಧಕ ಹಾಗೂ 3 ಬೋಧಕೇತರ ಸಿಬ್ಬಂದಿಗಳು ಇದ್ದು ಮಕ್ಕಳ ಸರ್ವಾಂಗೀನ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.ಇಲ್ಲಿಯವರೆಗೆ ವಸತಿ ಶಾಲೆಯಿಂದ 18 ಎಸ್.ಎಸ್.ಎಲ್.ಸಿ ಬ್ಯಾಚಗಳು ಮುಗಿದಿದ್ದು ಅದರಲ್ಲಿ 13 ಬ್ಯಾಚಗಳು ಶೇಕಡಾ 100 ಪ್ರತಿಶತ ಹೊಂದಿರುತ್ತಾರೆ, 2019–20ನೇ ಶೈಕ್ಷಣಿಕ ವರ್ಷದಲ್ಲಿ ಕುಮಾರ ಅಮರ ಕುರಬೆಟ ಇತನು ಅಂಗವಿಕಲರ ಕ್ರೀಡಾಕೂಟದಲ್ಲಿ ಭಲೇ ಎಸೆತ ವಿಭಾಗದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಯಲ್ಲಮ್ಮನಗುಡ್ಡ ತಾ॥ ಸವದತ್ತಿ ಜಿ॥ ಬೆಳಗಾವಿ ಪಿನ್ ಕೋಡ್:591126

ಮಂಜೂರಾದ ವರ್ಷ	1996
ಶೈಕ್ಷಣಿಕ ಕಾರ್ಯಾರಂಭ ವರ್ಷ	1996–97
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	15.757124–15.1249
ನಿವೇಶನದ ವಿಸ್ತೀರ್ಣತೆ	20 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಕ್ಷೇತ್ರ ರೇಣುಕಾ ದೇವಸ್ಥಾನ ಎಂದು ಕರೆಯಲ್ಪಡುವ ಯಲ್ಲಮ್ಮ ದೇವಸ್ಥಾನವು, ಭಾರತದ ಪ್ರಮುಖ ಶಕ್ತಿಪೀಠಗಳಲ್ಲಿ ಒಂದು. ಕರ್ನಾಟಕದ ಸವದತ್ತಿ ಪಟ್ಟಣದಿಂದ ಸುಮಾರು 5 ಕಿ.ಮೀ ದೂರದಲ್ಲಿರುವ ಒಂದು ಯಾತ್ರಾ ತಾಣವಾಗಿದೆ. ಇದು ಮೊದಲು ಸಿದ್ಧಚಲ್ ಪರ್ವತ ಎಂದು ಕರೆಯಲ್ಪಡುವ ಬೆಟ್ಟದ ತುದಿಯಲ್ಲಿದೆ ಮತ್ತು ಈಗ ಇದನ್ನು "ಯಲ್ಲಮ್ಮನಗುಡ್ಡ" ಎಂದು ಕರೆಯಲಾಗುತ್ತದೆ.

ಇದೇ ಸ್ಥಳದಲ್ಲಿ ಅಂದರೆ, ಸವದತ್ತಿ ಹಾಗೂ ಯಲ್ಲಮ್ಮನಗುಡ್ಡ ಮಧ್ಯ ಭಾಗದಲಿ ವಿಸ್ತಾರವಾಗಿ ಹಬ್ಬಿರುವ ಶಾಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ,ಯಲ್ಲಮ್ಮನಗುಡ್ಡ ತಾ॥ ಸವದತ್ತಿ ಜಿ॥ ಬೆಳಗಾವಿ ಇಲ್ಲಿ ನಮ್ಮ ವಸತಿ ಶಾಲೆ ಇದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸವದತ್ತಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ವಸತಿ ಶಾಲೆಯು ಸರ್ವೆನಂ:10 ರಲ್ಲಿ 20ಎಕರೆ ವಿಸ್ತಾರವಾದ ಭೂಪ್ರದೇಶದಲ್ಲಿ ಸುಂದರವಾದ ಕಟ್ಟಡಗಳನ್ನು ಹೊಂದಿದೆ.

ಇಲ್ಲಿ ಪ್ರತಿವರ್ಷವೂ ಬೆಳಗಾವಿ ಜಿಲ್ಲೆಯ ತಾಲೂಕುಗಳಿಂದ ಹಾಗೂ ಬೇರೆ ಜಿಲ್ಲೆಯ ತಾಲೂಕುಗಳಿಂದಲೂ ವಿವಿಧ ಜಾತಿ, ಮತ,ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ನಮ್ಮ ವಸತಿ ಶಾಲೆಗೆ ದಾಖಲಾತಿ ಪಡೆದು ನಾವೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಮನೋಭಾವನೆಯಿಂದ ವ್ಯಾಸಂಗ ಮಾಡುತ್ತಿದ್ದಾರೆ.

ನಿಗದಿತ ತರಗತಿಗಳಲ್ಲದೆ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸುಗಮವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ.ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಮೂಲಕ ಪ್ರತಿ ವಿಭಾಗದಲ್ಲಿಯೂ ವಿದ್ಯಾರ್ಥಿಗಳ ಸಾಧನೆಯನ್ನು ಗಮನಿಸಲಾಗುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಏಕಲವ್ಯ ಮಾದರಿ ವಸತಿ ಸಂಯುಕ್ತ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ

ತವಗ ಪೋಸ್ಟ್, ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕು, ಪಿನ್ ಕೋಡ– 591101

ಮಂಜೂರಾದ ವರ್ಷ	1999–2000
ಶೈಕ್ಷಣಿಕ ಕಾರ್ಯಾರಂಭ ವರ್ಷ	01–06–1999
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.08325 –74.80852
ನಿವೇಶನದ ವಿಸ್ತೀರ್ಣತೆ	25 ಎಕರೆ 16 ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	420

ವಿವರಣೆ

ಕುಂದರನಾಡಿನ ಗೋಕಾಕಿನಿಂದ 18ಕಿ.ಮೀ. ದೂರದಲ್ಲಿರುವ ತವಗದಲ್ಲಿ ಶ್ರೀ ಬ್ರಹ್ಮಶ್ರೀ ಬಾಳಯ್ಯ ಅಜ್ಜನ ಮಠದ ಕೃಪಾಕಟಾಕ್ಷದಿಂದ ಬರಡು ಸ್ಥಳದಲ್ಲಿ ಪರಿಶಿಷ್ಟ ವರ್ಗಗಳ ಏಕಲವ್ಯ ಮಾದರಿ ವಸತಿ ಶಾಲೆ ಪ್ರಾರಂಭವಾಗಿದೆ.

ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ತವಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರ್ವೆ ನಂ. 996 ನಲ್ಲಿ 25ಎಕರೆ 16ಗುಂಟೆ ವಿಶಾಲವಾದ ಭೂಭಾಗವನ್ನು ಹೊಂದಿದ್ದು, ಪ್ರತಿವರ್ಷ ಜಿಲ್ಲೆಯ ವಿವಿಧ ಮತಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ ಚೆಂದಾಗಿ ವಿದ್ಯಾರ್ಜನೆ ಮಾಡುತ್ತಿರುವ "ಸರ್ವಜನಾಂಗದ ಜ್ಞಾನ ದೇಗುಲ" ಈ ಶಾಲೆ ಕುಂದರನಾಡಿನ ಕಳಶಪ್ರಾಯದಂತೆ ಶೋಭಿಸುತ್ತಿದೆ.

ಅನೇಕ ಕಾರಣಗಳಿಂದ ರಾಜ್ಯಾದ್ಯಂತ ಹೆಸರು ಮಾಡಿರುವ ಈ ಶಾಲೆ ಇದುವರೆಗೂ ಹೊರಬಂದ 16 ಎಸ್.ಎಸ್.ಎಲ್.ಸಿ. ಬ್ಯಾಚ್ ಗಳಲ್ಲಿ 100 ಕ್ಕೆ 100 ರಷ್ಟು ಫಲಿತಾಂಶದ ಸಾಧನೆಯನ್ನು ಮಾಡಿರುವುದು ವಿಶೇಷ ಸಾಧನೆ. 2011–12 ನೇ ಸಾಲಿನಲ್ಲಿ ನಮ್ಮ ಶಾಲೆಯು ರಾಜ್ಯಕ್ಕೆ ಅತ್ಯುತ್ತಮ ಶಾಲೆಯೆಂದು ಹೆಗ್ಗಳಿಕೆಯನ್ನು ಪಡೆದು ಮಾನ್ಯ ಮುಖ್ಯಮಂತ್ರಿಗಳಿಂದ ಸನ್ಮಾನ ಮತ್ತು ಪಾರಿತೋಶಕವನ್ನು ಪಡೆದಿರುತ್ತದೆ.

ಇನ್ನಿತರ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಎಸ್.ಎಸ್.ಎಲ್.ಸಿ. ಯಲ್ಲಿ 2004 ರಿಂದ 2019 ರವರೆಗೂ ಸತತ 16 ಬಾರಿ 100 ಕ್ಕೆ 100 ರಷ್ಟು ಫಲಿತಾಂಶವನ್ನು ದಾಖಲಿಸಿರುವುದು ಈ ಶಾಲೆಯ ಶೈಕ್ಷಣಿಕ ಪ್ರಗತಿಗೆ ಸಾಕ್ಷಿಯಾಗಿದೆ ಹಾಗೂ 16 ಬಾರಿ 100 ಕ್ಕೆ 100 ರಷ್ಟು ಫಲಿತಾಂಶ ಪಡೆದ ರಾಜ್ಯದ ಏಕೈಕ ವಸತಿ ಶಾಲೆ ಇದಾಗಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆಯ ಗುಣಮಟ್ಟದ ಫಲಿತಾಂಶದ ಆಧಾರದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 2018–19 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಾಜರಾದ 56 ವಿದ್ಯಾರ್ಥಿಗಳಲ್ಲಿ A+ 14 ವಿದ್ಯಾರ್ಥಿಗಳು, A 42 ವಿದ್ಯಾರ್ಥಿಗಳು ಈ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕುಮಾರ ಅಭಿಷೇಕ ಧರಿಗೌಡರ 625 ಕ್ಕೆ 601 ಅಂಕಗಳನ್ನು ಪಡೆದು ಪ್ರತಿಶತ 96.16% ನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿರುತ್ತಾನೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಸಂಗೊಳ್ಳಿ ರಾಯಣ್ಣ ಸ್ಮಾರಕ ಸನಿವಾಸ ಶಾಲೆ 219

ನಂದಗಡ ತಾ॥ ಖಾನಾಪೂರ ಜಿ॥ ಬೆಳಗಾವಿ 591120

ಮಂಜೂರಾದ ವರ್ಷ	2001
ಶೈಕ್ಷಣಿಕ ಕಾರ್ಯಾರಂಭ ವರ್ಷ	2002–03
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.68 –74.30
ನಿವೇಶನದ ವಿಸ್ತೀರ್ಣತೆ	14ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	150

ವಿವರಣೆ

ಭಾರತೀಯರ ರಕ್ತ ನಮಿಸುವುದು ಇಲ್ಲಿ, ವೀರರಾಣಿ ಚನ್ನಮ್ಮ ತಾಯಿಯ ಮಾನಸಪುತ್ರ, ವೀರಕೇಸರಿ ಸಂಗೊಳ್ಳಿ ರಾಯಣ್ಣನ ದೇಶಭಕ್ತಿಯ ರಸದಿಂದ ಪಾವನವಾದ ಈ ಮಣ್ಣಿನಲ್ಲಿ ತಲೆ ಎತ್ತಿ ನಿಂತಿದೆ 'ಹುತಾತ್ಮ'ರ ಹೆಸರಿನ ನಮ್ಮ ಶಾಲೆ ಸಹ್ಯಾದ್ರಿ ಮಡಲಿನಲ್ಲಿ ವನಸಿರಿಯಲ್ಲಿ ಕಂಗೊಳಿಸುವ ಹೆಮ್ಮೆಯ ಶಾಲೆಯು ಕುಂದಾನದರಿ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ನಂದಗಡ ಗ್ರಾಮದ ಹೊರವಲಯದಲ್ಲಿ ವಿಶಾಲವಾಗಿ ಹರಡಿದೆ.

ಜ್ಞಾನ ಪಿಪಾಸುಗಳನ್ನು ಕೈಬೀಸಿ ಕರೆಯುತಿಹ ಈ ಶಾಲೆಗೆ ಬೆಳಗಾವಿ ವಿಭಾಗಮಟ್ಟದಿಂದ ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಬರುತ್ತಾರೆ. ಹದಿನೈದು ಸಾರಿ, ತನ್ನ ಗರ್ಭದಲ್ಲಿ ಐದು ವರ್ಷ ಜ್ಞಾನಸಂಸ್ಕಾರ ನೀಡಿ ಭಾರತಕ್ಕೆ ಸತ್ಪ್ರಜೆಗಳನ್ನು ನೀಡಿ ಹದಿನಾರನೇ ಬಾರಿಯ ಹೆರಿಗೆಗೆ ಸಿದ್ದವಾದ ಶಾಲೆಯ ಸತತ ದಾಖಲೆಯ ಫಲಿತಾಂಶವನ್ನೂ ನೀಡುತ್ತಿದೆ.

'ಶಾಲೆಯೊಂದು ಪುಟ್ಟ ಸಮಾಜ' ವೆಂಬಂತೆ ನಮ್ಮ ಪುಟ್ಟ ವಿದ್ಯಾರ್ಥಿ/ನಿಯರು ರಾಷ್ಟ್ರೀಯ ದಿನಾಚರಣೆಯಂದು ರಾಯಣ್ಣನ ಸಮಾಧಿ ಸ್ಥಳಕ್ಕೆ ತೆರಳಿ ಅದನ್ನು ಸ್ವಚ್ಛಗೊಳಿಸುವುದು, ಅಲಂಕರಿಸುವ ಕಾರ್ಯದಲ್ಲಿ ತೊಡಗಿ ಗ್ರಾಮ ಜನರ ಪ್ರೀತಿಯ ಭೋಜನದಲ್ಲಿ ನಕ್ಷತ್ರಪ್ರಾಯರಾಗಿ ಪಾಲ್ಗೊಂಡ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವರು.ಈ ಗ್ರಾಮದ ಜನರಲ್ಲಿ 'ಇದು ನಮ್ಮ ಶಾಲೆ' ಎಂಬ ಹೆಮ್ಮೆ ಮೂಡುವಂತೆ ಮಾಡಿದ್ದು ಈ ಶಾಲೆಯ ಕೀರ್ತಿಗೆ ಹಿಡಿದ ಕನ್ನಡಿ.

ಶೈಕ್ಷಣಿಕವಾಗಿ ನಡೆದು ಬಂದ ದಾರಿಯನ್ನು ಸಿಂಹಾವಲೋಕನ ಕ್ರಮದಿಂದ ನೋಡಲಾಗಿ 2018–19ರ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಅಂಕಪಡೆದ ಶಾಲೆಯ ಮಕ್ಕಳು ನಮ್ಮವರು (49 ಅತ್ಯುನ್ನತ ಶ್ರೇಣಿ) ಹಾಗೂ ನಮ್ಮ ವಸತಿ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿರುವ ಶಾಲೆಯಲ್ಲಿಯೇ ಹೆಚ್ಚು ಅಂಕಪಡೆದು ಮುಖ್ಯಮಂತ್ರಿಗಳಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರಿಂದ ಸನ್ಮಾನಿತರಾದ ವಿದ್ಯಾರ್ಥಿ/ನಿಯರೆಂದರೆ ಕುಮಾರಿ ಲಕ್ಷ್ಮೀ ಗಿರಿಯಾಲ (2011–12), ಕುಮಾರ ಚೇತನ ಚವ್ಹಣ್ಣವರ (2014–15), ಕುಮಾರ ನಾಗರಾಜ ಉಳ್ಳಾಗಡ್ಡಿ (2015–16), ಕುಮಾರಿ ಸಹನಾ ಯಂಬತ್ನಾಳ (2017–18).

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಯಕ್ಸಂಬಾ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ

ಮಂಜೂರಾದ ವರ್ಷ	2005–06
ಶೈಕ್ಷಣಿಕ ಕಾರ್ಯಾರಂಭ ವರ್ಷ	2005–06
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.50 –74.60
ನಿವೇಶನದ ವಿಸ್ತೀರ್ಣತೆ	13. 20 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	150

ವಿವರಣೆ

ಉತ್ತರ ಕರ್ನಾಟಕದ ಜನರ ಜೀವನದಿಯಾದ ಕೃಷ್ಣಾ ನದಿಯ ತೀರದಲ್ಲಿ ಸುತ್ತಲೂ ಸಮೃದ್ಧವಾದ ಕಬ್ಬಿಣ ಬೆಳೆಯ ನಡುವೆ ಕಂಗೊಳಿಸುವ ನಮ್ಮ ವಸತಿ ಶಾಲೆಯು ಮಹಾರಾಷ್ಟ್ರ ಗಡಿಯಿಂದ ಕೇವಲ 2 ಕಿ.ಮೀ ದೂರದಲ್ಲಿ ಇದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಪಟ್ಟಣ ಪಂಚಾಯತಿಯ ವ್ಯಾಪ್ತಿಯಲ್ಲಿ 13ಎಕರೆ 20 ಗುಂಟೆ ವಿಸ್ತೀರ್ಣದಲ್ಲಿ ಹಚ್ಚ ಹಸಿರಿನಿಂದ ಕಂಗೊಳಿಸುವ ಸಾವಿರಾರು ಮರಗಳ ನಡುವೆ ವಸತಿ ಶಾಲೆಯಿದ್ದು ಪ್ರತಿ ವರ್ಷವೂ 6ನೇ ತರಗತಿಗೆ ಬಡ ಪ್ರತಿಭಾನ್ವಿತ ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶಾಲೆಗೆ ದಾಖಲಾತಿ ಪಡೆದು ಅವರ ಜ್ಞಾನದ ದಾಹವನ್ನು ಇಂಗಿಸುವ ವಿದ್ಯಾಕಾಶಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಕ್ಸಂಬಾ.

2019ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ 50 ವಿದ್ಯಾರ್ಥಿಗಳು ಹಾಜರಾಗಿದ್ದರು ಅದರಲ್ಲಿ 22 ವಿದ್ಯಾರ್ಥಿಗಳು ಎ+ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ ಸದರಿ ಸಾಲಿನಲ್ಲಿ ರಂಗನಾಥ ಹಲಗಣಿ ವಿದ್ಯಾರ್ಥಿಯು 617 ಅಂಕಗಳನ್ನು ಪಡೆಯುವುದರೊಂದಿಗೆ ಕ್ರೈಸ್ ವಸತಿ ಶಾಲೆಗಳಲ್ಲಿ ರಾಜ್ಯಕ್ಕೆ 4ನೇ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿರುತ್ತಾನೆ ಕ್ರೈಸ್ ಸಂಸ್ಥೆಯ ಧ್ಯೇಯ ವಾಕ್ಯದಂತೆ "ಪ್ರತಿಭೆಗೆ ಪುರಸ್ಕಾರ" ಪಡೆಯುವ ಮಕ್ಕಳು ನಮ್ಮ ಶಾಲೆಯಲ್ಲಿದ್ದು ರಾಜ್ಯ ಮತ್ತು ರಾಷ್ಟ್ರಮಟ್ಟದವರೆಗೂ ಕ್ರೀಡಾ ಸಾಂಸ್ಕೃತಿಕ ರಂಗದಲ್ಲಿ ಸಾಧನೆ ಮಾಡಿ ನಮ್ಮ ಶಾಲೆಯ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ ಸನ್ 2020ರಲ್ಲಿ ಪೇಟ್ರೋಲಿಯಂ ಕನ್ಸರ್ವೇಶನ್ ರಿಸರ್ಚ್ ಅಸೋಸಿಯೇಶನ್ ನಡೆಸಿದ ರಾಜ್ಯ ಮಟ್ಟದ ಕನ್ನಡ ಭಾಷಾ ಪ್ರಬಂಧ ಸ್ಪರ್ಧೆಯಲ್ಲಿ ಕುಮಾರ ಶಂಭು ಖಾನಾಯಿ ಇತನು ರಾಜ್ಯಮಟ್ಟದಲ್ಲಿ ಪ್ರಥಮ ಹಾಗೂ ರಾಷ್ಟ್ರಮಟ್ಟದಲ್ಲಿ ದ್ವೀತಿಯ ಸ್ಥಾನ ಪಡೆದು ವಿಶೇಷ(ಟ್ಯಾಬ್, ಲ್ಯಾಪ್‌ಟಾಪ್ 25000 ನಗದು ಬಹುಮಾನ ಪಡೆದು ಶಾಲೆಯ ಕೀರ್ತಿಯನ್ನು ರಾಷ್ಟ್ರಮಟ್ಟದವರೆಗೂ ಹೆಚ್ಚಿಸಿರುತ್ತಾನೆ. ವಸತಿ ಶಾಲೆಯು ವಿದ್ಯಾರ್ಥಿಗಳ ಜ್ಞಾನದ ಮಟ್ಟವನ್ನು ಹೆಚ್ಚಿಸವ ನಿಟ್ಟಿನಲ್ಲಿ ಸುಸಜ್ಜಿತವಾದ ಗ್ರಂಥಾಲಯ ವಿಜ್ಞಾನ ಪ್ರಯೋಗಾಲಯ ಹೊಂದಿದ್ದು ಇದರ ಜೊತೆಗೆ ಸುಸಜ್ಜಿತವಾದ ಅಟಲ್ ಟಿಂಕರಿಂಗ ಲ್ಯಾಬ್ ಹೊಂದಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಸದಲಗಾ, ತಾ॥ ಚಿಕ್ಕೋಡಿ, ಜಿ॥ ಬೆಳಗಾವಿ, ಪಿನ್ ಕೋಡ್ 591239

ಮಂಜೂರಾದ ವರ್ಷ	2005
ಶೈಕ್ಷಣಿಕ ಕಾರ್ಯಾರಂಭ ವರ್ಷ	2006–07
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.538067–74.546540
ನಿವೇಶನದ ವಿಸ್ತೀರ್ಣತೆ	9.10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕನ್ನಡ ಭೂಮಿಯ ಕಿರೀಟ ಪ್ರಾಯವಾದ ಸಕ್ಕರೆ ಜಿಲ್ಲೆ ಎಂದೇ ಪ್ರಸಿದ್ಧವಾದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಕರ್ನಾಟಕದ ಗಡಿ ಅಂಚಿನಲ್ಲಿ ದೂಧಗಂಗಾ ನದಿ ತಟದಲ್ಲಿ ಸದಾ ಹಸಿರು ಹಸಿರಾದ ಪರಿಸರದಿಂದ ಶೋಭಿಸುತ್ತಿರುವ ಸದಲಗಾ ಪಟ್ಟಣದಲ್ಲಿ ಬಡ ಮಕ್ಕಳ ಬಾಳಿಗೆ ಜ್ಞಾನದ ಬೆಳಕನ್ನು ನೀಡುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸನ್ 2006–07 ನೇ ಸಾಲಿನಲ್ಲಿ ಪ್ರಾರಂಭವಾಯಿತು.

ಯೋಜನೆಯಿಲ್ಲದ ಕೆಲಸ ಗುರಿಯಿಲ್ಲದ ಹಡಗಿನಂತೆ ಎಂಬ ಮಾತಿನಂತೆ ಯಾವುದೇ ಕೆಲಸಕ್ಕೆ ಪೂರ್ವರೂಪಿತ ಯೋಜನೆಗಳು ನಿರ್ದಿಷ್ಟ ಗುರಿಗಳು ಅವಶ್ಯಕ ಈ ನಿಟ್ಟಿನಲ್ಲಿ ಪ್ರತಿ ವರ್ಷ ನಾವು ಶೈಕ್ಷಣಿಕ ಆರಂಭದಲ್ಲಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಸದರೀ ಯೋಜನೆ ಪ್ರಕಾರ ಕಾರ್ಯಕ್ಕೈಗೊಳ್ಳಲಾಗುತ್ತಿದೆ. ಮತ್ತು ಶಾಲಾ ಸಂಸತ್ತು ರಚಿಸಿ ವಿದ್ಯಾರ್ಥಿಗಳಿಗೆ ಕಾರ್ಯಹಂಚಿಕೆ, ದತ್ತು ಯೋಜನೆ, ಸದನಗಳ ರಚನೆ ಮುಂತಾದ ಪ್ರಗತಿಪರ ಕಾರ್ಯವನ್ನು ಹಾಕಿಕೊಂಡಿರುತ್ತೇವೆ. ನಮ್ಮ ಮೊರಾರ್ಜಿ ಶಾಲೆ ಮುತ್ತಿನ ಮಾಲೆ ಎನ್ನುವಂತೆ ಕಳೆದ 09 ವರ್ಷಗಳಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ 100% ಫಲಿತಾಂಶ ದಾಖಲಿಸಿದ್ದು ಹೆಮ್ಮೆಯ ಸಂಗತಿ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಧ ಘೋಷ್ಯವಾಕ್ಯ ಪ್ರತಿಭೆಗೆ ಪುರಸ್ಕಾರ ಎನ್ನುವ ವೇದವಾಕ್ಯದಂತೆ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಪಠ್ಯ ಮತ್ತು ಪಠ್ಯೆತರ ಚಟುವಟಿಕೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಮಕ್ಕಳಿಗೆ ಪಠ್ಯವಸ್ತುವಿನ ಜೊತೆಗೆ ಪಠ್ಯೆತರ ಚಟುಚಟಿಕಟಗಳಾದ ಕ್ರೀಡಾ ಮತ್ತು ಸಾಂಸ್ಕೃತಿಕಕ್ಕೆ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಕೊಡುತ್ತೀದ್ದೆವೆ. ನಮ್ಮ ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿಯಲ್ಲಿ ರಾಜ್ಯಮಟ್ಟದ ಜಾನಪದ ನೃತ್ಯಕ್ಕೆ ಎರಡು ಸಲ ಆಯ್ಕೆಯಾಗಿ ಪ್ರಶಸ್ತಿ ಗಿಟ್ಟಿಸಿ ಹೆಮ್ಮೆ ತಂದಿದ್ದಾರೆ. ಮತ್ತು ಜಿಲ್ಲಾ ಮಟ್ಟದ ಕಬ್ಬಡಿಗೆ ಪ್ರತಿ ವರ್ಷ ಬಾಲಕ–ಬಾಲಕಿಯರು ಸ್ಪರ್ದೆ ನೀಡಿ ನಮ್ಮ ವಸತಿ ಶಾಲೆಯ ಹೆಸರನ್ನು ಮತ್ತಷ್ಟು ಹೆಚ್ಚಿಸಿದ್ದಾರೆ.

ಬೆಳಿಗ್ಗೆ ಸೂರ್ಯೋದಯದಿಂದ 05.30 ರಿಂದ ಪ್ರಾರಂಭವಾಗಿ ರಾತ್ರಿ 10.30ರ ವರೆಗೆ ಮಕ್ಕಳ ಸರ್ವಾಂಗೀಣ ಅಭೀವೃದ್ಧಿಗಾಗಿ ಪ್ರಾಚಾರ್ಯರು, ಶಿಕ್ಷಕರು ಹಾಗೂ ಎಲ್ಲ ಸಿಬ್ಬಂದಿವರ್ಗದವರು ಒಟ್ಟಾರೆಯಾಗಿ ಘನ ಸರಕಾರವೂ ಬಡ ಮಕ್ಕಳಿಗೆ ಸಿಗಬಹುದಾದ ಮೂಲಭೂತ ಸಾಮಗ್ರಿಗಳನ್ನು ಹಿಡಿದು ಶಿಕ್ಷಣ.ಊಟ,ವಸತಿ ಎಲ್ಲವನ್ನು ನೀಡುತ್ತಾ ಸಾಕಾರ ಮಾಡುತ್ತಿದ್ದೇವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮಲ್ಲಾಪೂರ ಪಿ.ಜಿ ಅರಭಾಂವಿ ಹೋಬಳಿ, ಗೋಕಾಕ ತಾಲ್ಲೂಕು, ಬೆಳಗಾವಿ– 591306

ಮಂಜೂರಾದ ವರ್ಷ	2006–2007
ಶೈಕ್ಷಣಿಕ ಕಾರ್ಯಾರಂಭ ವರ್ಷ	2006–2007
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.232879–74.776366
ನಿವೇಶನದ ವಿಸ್ತೀರ್ಣತೆ	8 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

"ಶೈವಾವಸ್ಥೆಯಿಂದಲೇ ಮಕ್ಕಳು ಶಕ್ತಿ ಶಾಲಿಗಳಾಗುವಂತೆ ಮಾಡಿ. ಅವರಿಗೆ ದುರ್ಬಲತೆಯನ್ನಾಗಲಿ, ಮೂಡ ಆಚರಣೆಗಳನ್ನಾಗಲಿ ಬೋಧಿಸಬೇಡಿ. ಅವರನ್ನು ಶಕ್ತಿವಂತರನ್ನಾಗಿ ಮಾಡಿ." ಎಂಬ ಸ್ವಾಮಿ ವಿವೇಕಾನಂದರ ವಾಣಿಯಂತೆ, ಶಿಕ್ಷಣದ ಗುರಿಯನ್ನು ಇಟ್ಟುಕೊಂಡು ಹುಟ್ಟಿಕೊಂಡ ನಮ್ಮ ರಾಜ್ಯದ ಎರಡನೆಯ ರಾಜಧಾನಿ, ಸುವರ್ಣ ಸೌಧವನ್ನು ಹೊಂದಿದ ಏಕೈಕ ಜಿಲ್ಲೆ, ಕುಂದಾ ನಗರಿಯ ಸಿರಿನಾಡು ಬೆಳಗಾವಿ ಜಿಲ್ಲೆಯ, ಕರದಂಟು ನಾಡು ಎಂದೇ ಪ್ರಸಿದ್ಧವಾಗಿರುವ ಗೋಕಾಕ ತಾಲೂಕಿನ ಘಟಪ್ರಭೆಯ ನದಿತಟದ, ಭಾರತದ ನಯಾಗರ ಎಂಬ ಹಿರಿಮೆಗೆ ಪಾತ್ರವಾಗಿರುವ, ಏಷ್ಯಾದಲ್ಲಿಯೇ ಪ್ರಪ್ರಥಮ ಬಾರಿಗೆ ವಿದ್ಯುತ್ ಉತ್ಪಾದನೆ ಪ್ರಾರಂಬಿಸಿದ ಗೋಕಾಕ ಜಲಪಾತದಿಂದ 5 ಕಿ.ಮೀ ದೂರದಲ್ಲಿ, ಘಟಪ್ರಭಾ ಪಕ್ಷಿಧಾಮದಿಂದ 2 ಕಿ.ಮೀ ಸಮೀಪದ ಸುಂದರ ಪ್ರಕೃತಿಯ ರಮಣೀಯವಾದ ವಿಶಾಲವಾದ ಮಡಿಲಲ್ಲಿ ತಲೆ ಎತ್ತಿರುವುದೇ ನಮ್ಮಯ ಹೆಮ್ಮೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಲ್ಲಾಪೂರ ಪಿ.ಜಿ.

ಇದುವರೆಗೆ ಹೊರಬಂದ 9 ಎಸ್ ಎಸ್ ಎಲ್ ಸಿ ಬ್ಯಾಚ್‌ಗಳಲ್ಲಿ ಶೇಕಡಾ 100ಕ್ಕೆ 100% ಫಲಿತಾಂಶ ಪಡೆದಿದ್ದು ಹೆಮ್ಮೆಯ ವಿಚಾರ. 2017–18 ನೇ ಸಾಲಿನಲ್ಲಿ ಕು. ದೀಪಾ ನಾಯ್ಕರ 606 ಅಂಕ ಪಡೆದು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನವನ್ನು ಪಡೆದಿದ್ದು ನಮ್ಮ ಹೆಮ್ಮೆ. 2018–19 ನೇ ಸಾಲಿನ ಪರೀಕ್ಷೆಗೆ ಹಾಜರಾದ 43 ಜನ ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ಎ+ ಶ್ರೇಣಿಯಲ್ಲಿ, 10 ವಿದ್ಯಾರ್ಥಿಗಳು ಎ ಶ್ರೇಣಿಯಲ್ಲಿ,13 ವಿದ್ಯಾರ್ಥಿಗಳು ಬಿ + ಶ್ರೇಣಿಯಲ್ಲಿ, 2 ವಿದ್ಯಾರ್ಥಿಗಳು ಬಿ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು. ಕುಮಾರ ಪ್ರೇಮ ಹುಲ್ಲೋಳಿ 618 ಅಂಕ ಪಡೆದು , ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವೂ ನಡೆಸಲ್ಪಡುವ 819 ಶಾಲೆಗಳಲ್ಲಿಯೇ 3 ನೆಯ ಸ್ಥಾನವನ್ನು ಪಡೆದು ಮತ್ತೊಮ್ಮೆ ನಮ್ಮ ಶಾಲೆ ರಾಜ್ಯಮಟ್ಟದಲ್ಲಿ ಮಿಂಚುವಂತೆ ಮಾಡಿರುವುದು ಅದ್ಭುತವೇ ಸರಿ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಯಾದವಾಡ (ಹಿಂ.ವ.–224) ಗೋಕಾಕ ತಾಲ್ಲೂಕು,ಬೆಳಗಾವಿ ಜಿಲ್ಲೆ.

ಮಂಜೂರಾದ ವರ್ಷ	2006–2007
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–08
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	16 .255278
ನಿವೇಶನದ ವಿಸ್ತೀರ್ಣತೆ	9 ಎಕರೆ–35ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ರಾಜ್ಯದ ದ್ವಿತೀಯ ರಾಜಧಾನಿ, ಕುಂದಾ ನಗರಿಯಾಗಿರುವ ಕುಂದರನಾಡು–ಬೆಳಗಾವಿ ಜಿಲ್ಲೆಯಲ್ಲಿರುವ, ಕರದಂಟಿಗೆ ಹೆಸರುವಾಸಿಯಾಗಿರುವ ಹಾಗೂ ಗೋಕಾಕ ಜಲಪಾತದಿಂದ ಪ್ರಸಿದ್ಧವಾಗಿರುವ ಗೋಕಾಕ ತಾಲೂಕಾ ಕೇಂದ್ರದಿಂದ 48 ಕಿ ಮೀ ದೂರವಿದ್ದು ಸುಣ್ಣ ಹಾಗೂ ಸಿಮೆಂಟ್ ಕಾರ್ಖಾನೆಗಳಿಗೆ ಹೆಸರುವಾಸಿಯಾಗಿರುವ ಯಾದವಾಡ ಗ್ರಾಮದ ಗಡಿಯಲ್ಲಿ ಕಂಗೊಳಿಸುತ್ತಿರುವ ಭವ್ಯ ವಿದ್ಯಾಮಂದಿರವೇ ನಮ್ಮ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಾದವಾಡ.

SSLC ಪರೀಕ್ಷೆಯಲ್ಲಿ ಪ್ರಾರಂಭದಿಂದ ಸತತ 8 ಬಾರಿ 100% ಫಲಿತಾಂಶ ಪಡೆದಿರುವುದು ಇಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನಿದರ್ಶನವಾಗಿದೆ. ಪ್ರತಿ ಸಲವು ವಿದ್ಯಾರ್ಥಿಗಳಯ ಪ್ರಥಮ ಸ್ಥಾನ ಪಡೆದು ತನ್ನ ಶಾಲೆಗೆ, ಕವಶಿಸಂ.ಸಂಘಕ್ಕೆ ಹಾಗೂ ತನ್ನ ತಂದೆ–ತಾಯಿಗೆ ಹೆಮ್ಮೆ ತಂದಿರುತ್ತಾರೆ.

ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿಯೂ ಸಹ ನಮ್ಮ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿದ್ದು ಪ್ರತಿಭಾ ಕಾರಂಜಿ ಹಾಗೂ ಸತೀಶ ಶುಗರ್ಸ್ ಅವಾರ್ಡ್ಸ್ ಕಾರ್ಯಕ್ರಮಗಳಲ್ಲಿ ಸಾಕಷ್ಟು ಪ್ರಶಸ್ತಿ ಹಾಗೂ ನಗದು ಬಹುಮಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ. ಎಲ್ಲ ಶಿಕ್ಷಕರು/ಸಿಬ್ಬಂದಿಯ ಮಾರ್ಗದರ್ಶನದಲ್ಲಿ ವಿವಿಧ ಸಹಪಠ್ಯ /ಲಲಿತಕಲಾ ಚಟುವಟಿಕೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ವೃದ್ಧಿಸುತ್ತಿವೆ. ವಿವಿಧ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಉತ್ತಮ ಸ್ಥಾನಗಳನ್ನು ಪಡೆದಿರುತ್ತಾರೆ. ಅಷ್ಟೆ ಅಲ್ಲದೆ ಯೋಗಾಸನ–ಪ್ರಾಣಾಯಾಮ, ಜಾಗಿಂಗ್–ವಾಕಿಂಗ್ ನೊಂದಿಗೆ ದಿನನಿತ್ಯದ ಕ್ರೀಡಾ ಚಟುವಟಿಕೆಗಳು ಮಕ್ಕಳ ದೈಹಿಕ ಮತ್ತು ಭೌದ್ಧಿಕ ಕ್ಷಮತೆಯೊಂದಿಗೆ ಮಾನಸಿಕ ಶಕಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ.

ಶಾಲಾ ಅವಧಿಯ ನಂತರ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯ ನಿಗದಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಪರಿಹಾರ ಬೋಧನೆ ಮತ್ತು ವಿಶೇಷ ತರಗತಿಗಳ ಮೂಲಕ ಕಲಿಕೆಗೆ ವಿಶೇಷ ಕಾಳಜಿವಹಿಸಲಾಗುತ್ತದೆ. ಅನುಭವಿ ಹಾಗೂ ತರಬೇತಿ ಹೊಂದಿದ ನುರಿತ ಶಿಕ್ಷಕರುಗಳ ಪರಿಣಾಮಕಾರಿ ಬೋಧನೆ ಹಾಗೂ ಅರ್ಪಣಾ ಮನೋಭಾವ ಹಾಗೂ ಸದಾ ಲವಲವಿಕೆಯಿಂದ ಕಲಿಕೆಯಲ್ಲಿ ತೊಡಗಿರುವ ಮತ್ತು ವಿದ್ಯಾಭ್ಯಾಸ ಮುಗಿಸಿ ಉನ್ನತ ಶಿಕ್ಷಣ–ಉದ್ಯೋಗಗಳಿಗೆ ಸೇರಿರುವ ನಮ್ಮ ವಿದ್ಯಾರ್ಥಿಗಳೇ ನಮ್ಮ ಶಾಲೆಯ ಏಳಿಗೆಗೆ ಕಾರಣರಾಗಿರುತ್ತಾರೆ. ವಿದ್ಯಾಭ್ಯಾಸ ಬಯಸಿ ಬಂದ ಪ್ರತಿಭೆಗಳಿಗೆ ಪುರಸ್ಕಾರ ನೀಡಿ, ಸರ್ವಾಂಗೀಣ ಶಿಕ್ಷಣದೊಂದಿಗೆ ಮಕ್ಕಳನ್ನು ಪರಿಪೂರ್ಣ ನಾಗರಿಕರನ್ನಾಗಿ ರೂಪಿಸುವುದೇ ನಮ್ಮ ಶಾಲೆಯ ಧ್ಯೇಯವಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಕೌಜಲಗಿ (ಪ.ಜಾ–225), ತಾ:ಗೋಕಾಕ ಜಿ: ಬೆಳಗಾವಿ

ಮಂಜೂರಾದ ವರ್ಷ	2006
ಶೈಕ್ಷಣಿಕ ಕಾರ್ಯಾರಂಭ ವರ್ಷ	2006–07
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	16.19–75.06
ನಿವೇಶನದ ವಿಸ್ತೀರ್ಣತೆ	11.30 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕೌಜಲಗಿ ಹೋಬಳಿಯ ಕೌಜಲಗಿ ಪಂಚಾಯತ ವ್ಯಾಪ್ತಿಯ 11 ಎಕರೆ 30 ಗುಂಟೆ ಜಾಗದಲ್ಲಿ ನಮ್ಮ ವಸತಿ ಶಾಲೆಯು ನಿರ್ಮಾಣಗೊಂಡಿದ್ದು ಪ್ರತಿ ವರ್ಷವು ಜಿಲ್ಲೆಯಲ್ಲಿಯೇ ಪ್ರಥಮ ಪ್ರಾಶಸ್ತ್ಯದೊಂದಿಗೆ ಪ್ರವೇಶ ಪಡೆದು ವಿವಿಧ ಜಾತಿಯ ಮತ್ತು ವಿವಿಧ ತಾಲ್ಲೂಕಿನ ವಿದ್ಯಾರ್ಥಿಗಳು ನಮ್ಮ ಶಾಲೆಯಲ್ಲಿ ಒಂದಾಗಿ ಸೇರಿ ಅತಿ ಉತ್ಸುಸಕತೆಯಿಂದ ವಿದ್ಯಾರ್ಜನೆ ಪಡೆಯತ್ತಿದ್ದಾರೆ.

ನಮ್ಮ ಶಾಲೆಯು ಸನ್ 2017–18ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿನಿ ಕುಮಾರಿ ರಾಜಶ್ರೀ ತುಪಳಿ 100 ಮೀ & 200 ಮೀ ಓಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ನಮ್ಮ ಶಾಲೆಯ ಕೀರ್ತಿ ಹೆಚ್ಚಿಸಿದ ಹೆಮ್ಮೆಯ ಕುಡಿ ಎಂದು ಹೇಳಲು ತುಂಬಾ ಸಂತೋಷವೆನಿಸುತ್ತದೆ.

ಪ್ರಸಕ್ತ ಸಾಲಿನಲ್ಲಿ ನಮ್ಮ ವಸತಿ ಶಾಲೆಯ ಪ್ರಾಥಮಿಕ ಬಾಲಕರ ಖೋ ಖೋ ತಂಡ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ದ್ವೀತಿಯ ಸ್ಥಾನ ಪಡೆದಿರುತ್ತಾರೆ ಮತ್ತು 4 ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ನಮ್ಮ ವಸತಿ ಹಿರಿಮೆಯನ್ನು ಮತು ಕೀರ್ತಿಯನ್ನು ಇಮ್ಮಡಿ ಮಾಡಿ ಬೆಳಗಾವಿ ಜಿಲ್ಲೆ ಮಾದರಿಯಾಗಿದೆ. ಇದೇ ಸಾಲಿನಲ್ಲಿ ಪ್ರೌಢ ವಿಭಾಗದ 4 ? 100 ಮೀ ರಿಲೇ ತಂಡದ ಕುಮಾರ ದುರ್ಗಪ್ಪ ವಡ್ಡರ, ಕುಮಾರ ಪ್ರವೀಣ ತಮ್ಮನ್ನವರ, ಕಿರಣ ಭಜಂತ್ರಿ, ಪ್ರಶಾಂತ ಸವದತ್ತಿ ಮತ್ತು ಕುಮಾರ ಶಂಕರ ತಳವಾರ 800 ಮೀ ಓಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ನಮ್ಮ ಶಾಲೆಯ ವಸತಿ ಶಾಲೆಯ ಹೆಮ್ಮೆಯನ್ನು ಹೆಚ್ಚಿಸಿರುತ್ತಾರೆ.

ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಸರು ಮಾಡುತ್ತಿರುವ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ "ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ" ನೀಡುತ್ತಿರುವ ಮೂಡಲಗಿ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಕಾರದಿಂದ ಪ್ರತಿ ವರ್ಷದಂತೆ ಸನ್ 2018–19ನೆ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ನಮ್ಮ ಶಾಲೆಯ 51 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 39 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 12 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಹಾಗಾಗಿ ಪ್ರತಿ ವರ್ಷವು ನಮ್ಮ ಶಾಲೆ ಫಲಿತಾಂಶದಲ್ಲಿ 100% ಮಾಡಿ ಗುಣಾತ್ಮಕ ಫಲಿತಾಂಶ ನೀಡಿ ವಲಯದಲ್ಲಿಯೇ ಹೆಸರು ಮಾಡುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮು: ಮಜಲಟ್ಟಿ ಪೋಸ್ಟ : ವಡ್ರಾಳ ತಾ: ಚಿಕ್ಕೋಡಿ ಜಿಲ್ಲೆ: ಬೆಳಗಾವಿ–591226

ಮಂಜೂರಾದ ವರ್ಷ	2006–07
ಶೈಕ್ಷಣಿಕ ಕಾರ್ಯಾರಂಭ ವರ್ಷ	2006–07
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	15.75–74.10
ನಿವೇಶನದ ವಿಸ್ತೀರ್ಣತೆ	10–00 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಸಕ್ಕರೆಯ ನಾಡು, ಸ್ವಾತಂತ್ರ್ಯ ಹೋರಾಟಗಾರರ ತವರೂರು. ಐತಿಹಾಸಿಕ ಸ್ಥಳವಾದ ಬೆಳಗಾವಿ ಜಿಲ್ಲೆ, ಈ ಬೆಳಗಾವಿ ಜಿಲ್ಲೆಯಲ್ಲಿನ ನಮ್ಮ ನೆಚ್ಚಿನ ಶಾಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಜಲಟ್ಟಿ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ (ಚಿಕ್ಕೋಡಿ ತಾಲೂಕಿನ) ನಾಗರಮುನ್ನೋಳಿ ಹೋಬಳಿಯ ವಡ್ರಾಳ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸುಮಾರು 10 ಎಕರೆ ಭೂಭಾಗವನ್ನು ಹೊಂದಿದೆ. ಪ್ರತಿ ವರ್ಷ ಬೇರೆ ಬೇರೆ ಜಿಲ್ಲೆ ಹಾಗೂ ತಾಲೂಕುಗಳಿಂದ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ ಕೂಡಿಕೊಂಡು ವಿದ್ಯಾರ್ಜನೆ ಮಾಡುತ್ತಿರುವ ನಮ್ಮ ವಸತಿ ಶಾಲೆ.

ಇಲ್ಲಿಯವರೆಗೆ ಸುಮಾರು 09 ಎಸ್.ಎಸ್.ಎಲ್.ಸಿ ಬ್ಯಾಚ್‌ಗಳಲ್ಲಿ 8 ಬ್ಯಾಚ್‌ಗಳು 100% ಫಲಿತಾಂಶ ದಾಖಲಿಸಿವೆ. ಅಷ್ಟೇ ಅಲ್ಲದೇ ಅನೇಕ ಬಾರಿ ರಾಜ್ಯ ಮಟ್ಟಕ್ಕೆ ಕೀಡಾಕೂಟದಲ್ಲಿ ಮಕ್ಕಳು ಆಯ್ಕೆಯಾಗಿರುತ್ತಾರೆ. ಪ್ರತಿಭಾ ಕಾರಂಜಿಯಲ್ಲಿಯೂ ಸಹ ಮಕ್ಕಳು ತಮ್ಮ ಪ್ರತಿಭೆಗಳನ್ನು ತೋರಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಸೂರ್ಯೋದಯದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10 ಗಂಟೆಯ ತನಕ ನಿರಂತರವಾಗಿ ಸಾಗುತ್ತದೆ. ಬೆಳಗಿನ ತಣ್ಣನೆಯ ಪರಿಸರದಲಿ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಕೆಲವು ಸರಳ ವ್ಯಾಯಾಮ ಹಾಗೂ ಯೋಗಾಸನ, ಪ್ರಾಣಾಯಮಗಳು ಆಹ್ಲಾದವನ್ನೂ, ಚೈತನ್ಯವನ್ನೂ, ತುಂಬುತ್ತದೆ. ಅತ್ಯಾಧುನಿಕ ಜಿಮ್ ವ್ಯವಸ್ಥೆ ಹೊಂದಿದ್ದು ಈ ಶಾಲೆಯ ಇನ್ನೊಂದು ವಿಶೇಷತೆ.

ನಿಗದಿತ ತರಗತಿಗಳಲ್ಲದೇ ಮುಂಜಾನೆ ಮತ್ತು ಸಾಯಂಕಾಲ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮಿಸಲಿಡಲಾಗಿದೆ. ಕಲಿಕೆಯಲ್ಲಿ ಹಿಂದೂಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸರಾಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಲಾಗುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ, ಅವರ ಅರ್ಪಣಾ ಭಾವ, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ಹಾಗೂ ವಿಜ್ಞಾನ ಸಂಘ, ಸಾಂಸ್ಕೃತಿಕ ಸಂಘ, ಆರೋಗ್ಯ ಸಂಘ, ಕಾನೂನು ಸಾಕ್ಷರತಾ ಸಂಘ, ಮಹಿಳಾ ಸಂಘ, ಕ್ರೀಡಾ ಸಂಘಗಳ ಮೂಲಕ ವರ್ಷ ಪೂರ್ತಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ರಾಜನಕಟ್ಟಿ ತಾ/ಗೋಕಾಕ ಜಿ/ಬೆಳಗಾವಿ ಪೀನ್ ಕೋಡ್–591344

ಮಂಜೂರಾದ ವರ್ಷ	2006–07
ಶೈಕ್ಷಣಿಕ ಕಾರ್ಯಾರಂಭ ವರ್ಷ	2006–07
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.5833–74.47
ನಿವೇಶನದ ವಿಸ್ತೀರ್ಣತೆ	9 ಎಕರೆ 35 ಗು
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಸಕ್ಕರೆಯ ಜಿಲ್ಲೆಯೆಂದು ಖ್ಯಾತವಾದ ಅಕ್ಕರೆಯ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಗೋಕಾಕ ಹೋಬಳಿಯ ಮದವಾಲ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ರಾಜನಕಟ್ಟಿ ಗ್ರಾಮದ ಸುಂದರವಾದ ನಿಸರ್ಗದ ಮಡಿಲಲ್ಲಿ ಸುಮಾರ 9 ಎಕರೆ 35 ಗುಂಟೆ ಜಾಗದಲ್ಲಿ ನಮ್ಮ ವಸತಿ ಶಾಲೆಯು ನಿರ್ಮಾಣಗೊಂಡಿದ್ದು ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳ ಬಾಳಿಗೆ ಆಶಾಕಿರಣವಾಗಿದೆ.

ಸೂರ್ಯೋದಯದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10 ಗಂಟೆಯತನಕ ನಿರಂತರವಾಗಿ ನಡೆಯುತ್ತಿದೆ.ಉತ್ತಮವಾದ ವಾತಾವರಣ ಸುಸುಜ್ಜಿತವಾದ ಕಟ್ಟಡ ಸಾವಿರಾರು ಪುಸ್ತಕಗಳಿಂದ ತುಂಬಿದ ಗ್ರಂಥಾಲಯ,ಪ್ರಯೋಗಾಲಯ ಅನುಭವಿ ಶಿಕ್ಷಕರ ಪರಿಣಾಮಕಾರಿ ಮಾರ್ಗದರ್ಶನದೊಂದಿಗೆ ಆರಂಭದಿಂದ ಇಲ್ಲಿಯವರೆಗೆ ಸತತ 9 ವರ್ಷ ಎಸ್.ಎಸ್.ಎಲ್.ಸಿ ಫಲಿತಾಂಶ 100% ಆಗುವುದರೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಕೂಡಾ ರಾಜ್ಯಮಟ್ಟದಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆಂದು ಹೇಳಲು ಹೆಮ್ಮೆ ಎನಿಸುತ್ತದೆ.

ಕಳೆದ ಸಾಲಿನಲ್ಲಿ ನಮ್ಮ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು 100% ಆಗುವುದರ ಜೊತೆಗೆ 26 ವಿದ್ಯಾರ್ಥಿಗಳು ಅತ್ಯುತ್ಯಮ ಶ್ರೇಣಿಯಲ್ಲಿ ಮತ್ತು 22 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕ್ರೀಡಾ ಚಟುವಟಿಕೆಗಳಲ್ಲಿ 2 ಜನ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದರು.

ಶಾಲೆಯಲ್ಲಿ ವಿಷಯವಾರು ಸಂಘಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳಲ್ಲಿ ವಿಜ್ಞಾನ, ಕಲೆ, ಸಾಹಿತ್ಯಗಳಲ್ಲಿ ಆಸಕ್ತಿ ಮೂಡಿಸಿ ಅವರಲ್ಲಿ ಸೃಜನಾತ್ಮಕತೆ ಬೆಳೆಯಲು ಪ್ರೋತ್ಸಾಹಿಸಲಾಗಿದೆ.

ಒಟ್ಟಿನಲ್ಲಿ ನಮ್ಮ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಶಿಕ್ಷಕರ ಪರಿಣಾಮಕಾರಿ ಭೋಧನೆ, ಶಾಲೆಯ ಉತ್ತಮ ವಾತಾವರಣ, ಸರಕಾರಿ ಸೌಲಭ್ಯಗಳು ಸೇರಿದಂತೆ ಹಲವಾರು ಸೌಲಭ್ಯಗಳನ್ನು ಪಡೆದುಕೊಂಡು ಗುಣಾತ್ಮಕ ಶಿಕ್ಷಣದೊಂದಿಗೆ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುತ್ತಿದ್ದಾರೆ. ಮುಂದೆ ಒಳ್ಳೆಯ ಕೊರ್ಸಗಳನ್ನು ಆಯ್ಕೆ ಮಾಡಿಕೊಂಡು, ಉತ್ತಮ ರೀತಿಯ ಉನ್ನತ ಶಿಕ್ಷಣ ಪಡೆದು, ತಮ್ಮ ಜೀವನ ರೂಪಿಸಿಕೊಳ್ಳುವುದರ ಜೊತೆಗೆ ಹೆತ್ತ ತಂದೆ ತಾಯಿಗೆ ಆಶ್ರಯದಾತರಾಗಿ ನಾಡಿನ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ ಎಂದು ಹೇಳಲು ಹೆಮ್ಮೆ ಅನಿಸುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಕಟಕೋಳ (ಎಸ್.ಸಿ228) ತಾ॥ ರಾಮದುರ್ಗ ಜಿ॥ ಬೆಳಗಾವಿ

ಮಂಜೂರಾದ ವರ್ಷ	2007
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–08
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.30–74.80
ನಿವೇಶನದ ವಿಸ್ತೀರ್ಣತೆ	15 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕಟಕೋಳ ಗ್ರಾಮದಿಂದ ಎರಡು ಕಲೋ ಮೀಟರ್ ದೂರದಲ್ಲಿರುವ ರಾಮನಮಡ್ಡಿಯಲ್ಲಿ ಸುಮಾರು 15 ಎಕರೆ ವಿಸ್ತಿರಣದಲ್ಲಿ ಮನಮೋಹಕವಾಗಿ ಭಾವ ಪ್ರಪುಲ್ಲಗೊಳಿಸುವಂತ್ತೆ ಕಂಗೋಳಿಸುವುದೇ ಮೊರಾರ್ಜಿ ದೇಸಯಿ ವಸತಿ ಶಾಲೆ,ಕಟಕೋಳ ನಮ್ಮ ಶಾಲೆ, ಸಂಸ್ಕೃತಿಕವಾಗಿ ಹಾಗು ಶೈಕ್ಷಣಿಕವಾಗಿ ವರ್ಷದಿಂದ ವರ್ಷಕ್ಕೆ ಮೇಲುಸ್ತರಕ್ಕೇರುತ್ತಿವುದು. ನಮ್ಮ ಶಾಲೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಕ್ರಡಾಕೂಟಗಳಲ್ಲಿ ಪ್ರತಿ ವರ್ಷ ಭಾಗವಹಿಸುತ್ತರುವುದೇ ಸಾಕ್ಷಿ.

ಅನೇಕ ಕಾರಣಗಳಿಂದ ರಾಜ್ಯದ್ಯಂತ ಹೆಸರುವಾಸಿಯಾಗಿರುವ ನಮ್ಮ ವಸತಿ ಶಾಲೆ ಇದುವರೆಗೆ ಎಸ್.ಎಸ್.ಎಲ್.ಸಿ ಬ್ಯಾಚಗಳಲ್ಲಿ 6 ಬ್ಯಾಚಗಳು 100%ಕ್ಕೆ 100%ರಷ್ಟು ಪಲಿತಾಂಶ ದಾಖಲಿಸಿರುವುದು ನಮ್ಮ ಶಾಲೆಯ ಶೈಕ್ಷಣಿಕ ಸಾಧನೆಗೆ ಸಾಕ್ಷಿಯಾಗಿದೆ.

ಹಾಗೇಯೇ ಇಡಿ ಕಟಕೋಳ–ಹನುಮಸಾಗರ ವಲಯದಲ್ಲೇ ಸತತವಾಗಿ ಎರಡು–ಮೂರು ವರ್ಷಗಳಿಂದ ಎಸ್.ಎಸ್.ಎಲ್.ಸಿ ಯಲ್ಲಿ 100%ಕ್ಕೆ 100%ರಷ್ಟು ಫಲಿತಾಂಶ ಹೊಂದುತ್ತರುವ ಏಕೈಕ ಶಾಲೆ ನಮ್ಮದಾಗಿದೆ.

ಸೂರ್ಯೋದಯದೋದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10ಗಂಟೆಯ ತನಕ ನಿರಂತರವಾಗಿ ಸಾಗುತ್ತದೆ. ಬೆಳಗ್ಗಿನ ತಣ್ಣಗಿನ ಪ್ರಕೃತಿಯಲ್ಲಿ ದೈಹಿಕ ಶಿಕ್ಷಕರ ಮಾರ್ಗದರ್ಶನದೊಂದಿಗೆ ಕೆಲವು ಸರಳ ವ್ಯಾಯಾಮಗಳ,ಯೋಗಾಸನ,ಪ್ರಾಣಾಯಾಮಗಳು ಆಹ್ಲಾದವನ್ನೂ ಚೈತನ್ಯವನ್ನು ತುಂಬುತ್ತದೆ. ಅತ್ಯಾದುನಿಕ ಜಿಮ್ ವ್ಯವೆಸ್ಥೆ ಹೊಂದಿದ್ದು ಈ ಶಾಲೆಯ ಇನ್ನೊಂದು ವಿಶೆಷತೆ.

ನಿಗದಿತ ತರಗತಿಗಳಿಲ್ಲದ ಬೆಳಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋದನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳದ್ಯೆನಂದಿನ ಕಲಕೆ ಸರಾಗವಾಗಿ ನಡೆಯುವಂತ್ತೆ ಕಾಳಜಿವಹಿಸಲಾಗುತ್ತದೆ.ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತೀ ಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಲಾಗುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ ಅವರ ಅರ್ಪಣಾ ಭಾವ, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲೂ ವಿದ್ಯಾರ್ಥಿಗಳನ್ನು ತಡಗಿಸಿಕೊಳ್ಳುವಂತ್ತೆ ಮಾಡಿದೆ. ಇಲ್ಲಿರುವ ಭಾಷಾ, ಸಂಘ, ಪರಿಸರ ವಿಜ್ಞಾನ ಸಂಘ, ಆರೋಗ್ಯ ಸಂಘ, ಕಾನೂನ ಸಾಕ್ಷರತಾ ಸಂಘ, ಕ್ರಿಡಾ ಸಂಘಗಳ ಮೂಲಕ ಪೂರ್ತಿ ವಿವಿಧ ಸ್ಪರ್ದೆಳನ್ನು ಏರ್ಪಡಿಸುವ ಮೂಲಕ ನಮ್ಮ ಶಾಲೆ ಪ್ರಶಂಷಣಾರ್ಹವಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಅಳಗವಾಡಿ–591317, ತಾ॥ ರಾಯಬಾಗ, ಜಿ॥ ಬೆಳಗಾವಿ

ಮಂಜೂರಾದ ವರ್ಷ	2007
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–08
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.30–74.80
ನಿವೇಶನದ ವಿಸ್ತೀರ್ಣತೆ	10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆ, ರಾಯಬಾಗ ತಾಲೂಕಿನ ಅಳಗವಾಡಿ ಗ್ರಾಮದ ಸುಮಾರು 10 ಎಕರೆದಷ್ಟು ವಿಶಾಲವಾದ ಸರಕಾರಿ ಭೂಭಾಗದಲ್ಲಿ ನಮ್ಮ ವಸತಿ ಶಾಲೆಯು ಒಂದು. ದಿನಾಂಕ: 01–06–2007ರಂದು ಪ್ರಾರಂಭವಾದ ಶಾಲೆಯು ಪ್ರತಿ ವರ್ಷವು ತನ್ನದೇ ಆದ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಆಯ್ಕೆಗೊಳ್ಳುವರು. ಅತಂಹ ವಿದ್ಯಾರ್ಥಿಗಳಲ್ಲಿಯೇ 2014–15ನೇ ಸಾಲಿನ ಎಸ್.ಎಸ್.ಎಲ್.ಸಿ.ಯ ಪರೀಕ್ಷೆಯಲ್ಲಿ ಕು. ಮಹೇಶ ಕೊಪ್ಪದ ವಿದ್ಯಾರ್ಥಿಯು 621 ಅಂಕಗಳನ್ನು ಪಡೆದು ಕರ್ನಾಟಕ ರಾಜ್ಯಕ್ಕೆ 3ನೇ ರ್‍ಯಾಂಕ್‌ನ್ನು ಪಡೆದು ನಮ್ಮ ಶಾಲೆಯ ಕಿರೀಟವು ಒಂದು ಶ್ರೇಷ್ಠ ಗರಿ ಮುಡಿದದ್ದು ಶಾಲೆಯ ಹೆಮ್ಮೆಯ ಸಂಗತಿಯಾಗಿದೆ. ಅದೇ ವಿದ್ಯಾರ್ಥಿಯು 2017–18ನೇ ಸಾಲಿನ ನೀಟ್ ಪರೀಕ್ಷೆಯಲ್ಲಿ ಭಾರತದಲ್ಲಿಯೇ 613ನೇ ರ್‍ಯಾಂಕ್ ಪಡೆದು ಎಂಬಿಬಿಎಸ್ ಪದವಿಯನ್ನು ಅಧ್ಯಯನ ನಡೆಸುತ್ತಿದ್ದಾನೆ.

2011–12ನೇ ಸಾಲಿನಿಂದ ಸತತವಾಗಿ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100ಕ್ಕೆ 100ರಷ್ಟು ಫಲಿತಾಂಶವನ್ನು ಹೊಂದುವುದರ ಮೂಲಕ ತಾಲೂಕಿನಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಇಲ್ಲಿಯವರೆಗೆ 347 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗಿ 346 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅವರಲ್ಲಿ 183 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ನಿಗಧಿತ ತರಗತಿಗಳಲ್ಲದೇ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 10 ಗಂಟೆಯ ತನಕ ನಿರಂತರ ವ್ಯಾಯಮ, ಪಾಠ–ಪ್ರವಚನಗಳು ಶಾಲೆಯ ದಿನಚರಿಯಾಗಿದೆ.

ಇನ್ನು ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿ ವಿಭಾಗಗಳಲ್ಲಿಯು ಸಹ ನಮ್ಮ ವಸತಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ, ರಾಜ್ಯ ಹಾಗೂ ರಾಷ್ಟ್ರ ಮಟ್ಟಗಳಲ್ಲಿ ಕೀರ್ತಿಯನ್ನು ತಂದು ಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ನಾಗನೂರ ತಾ:ಗೋಕಾಕ ಜಿ:ಬೆಳಗಾವಿ – 591224

ಮಂಜೂರಾದ ವರ್ಷ	2008
ಶೈಕ್ಷಣಿಕ ಕಾರ್ಯಾರಂಭ ವರ್ಷ	2008–09
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.30– 74.90
ನಿವೇಶನದ ವಿಸ್ತೀರ್ಣತೆ	4 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕರ್ನಾಟಕದಲ್ಲಿಯೆ ಹೆಚ್ಚು ವಸತಿ ಶಾಲೆಗಳನ್ನು ಹೊಂದಿದ, ಸಿಹಿಗೆ ಹೆಸರಾದ ಗೋಕಾಕ ಕರದಂಟು ನಾಡಿನ ಜತ್ತ–ಜಾಂಬೋಟಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಅತಿ ಸುಂದರವಾದ ಪ್ರಕೃತಿ ಮಡಿಲಲ್ಲಿ ವಿಶಾಲವಾಗಿ ಹರಡಿಕೊಂಡಿರುವ ನಮ್ಮ ಹೆಮ್ಮೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ, (ಪ.ಜಾ–230) ನಾಗನೂರ.

ಕುಂದಾನಗರಿ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅರಭಾವಿ ಹೋಬಳಿಯ ನಾಗನೂರ ಪಟ್ಟಣ ಪಂಚಾಯತ ವ್ಯಾಪ್ತಿಯ 3 ಎಕರೆ ಭೂಭಾಗವನ್ನು ಹೊಂದಿ ಕ್ಷೇತ್ರದ ಶಾಸಕರ ಹಾಗೂ ಗ್ರಾಮದ ಹಿರಿಯರ ಸಹಕಾರದೊಂದಿಗೆ ಪಕ್ಕದ ಸರಕಾರಿ 2 ಎಕರೆ ಜಮೀನನ್ನು ಒತ್ತುವರಿ ಮಾಡಿ ಒಟ್ಟು 5 ಎಕರೆ ಜಾಗದಲ್ಲಿ ವಿಶ್ವವಿದ್ಯಾಲಯದಂತೆ ತಲೆ ಎತ್ತಿದ್ದು "ನಮ್ಮ ಶಾಲೆ ನಮ್ಮ ಹೆಮ್ಮೆ' ಎಂಬ ಶಿರ್ಷಿಕೆ ಹೊಂದಿರುವ ನಮ್ಮ ಶಾಲೆಯು ಪ್ರತಿ ವರ್ಷವು ಜಿಲ್ಲೆಯಲ್ಲಿಯೇ ಪ್ರಥಮ ಆಧ್ಯತೆಯೊಂದಿಗೆ ಪ್ರವೇಶ ಪಡೆದು ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ನಮ್ಮ ಶಾಲೆಯಲ್ಲಿ ಒಂದಾಗಿ ಸೇರಿ ಖುಷಿಯಿಂದ ವಿದ್ಯಾರ್ಜನೆ ಪಡೆಯತ್ತಿದ್ದಾರೆ.

ಪ್ರತಿ ದಿನ ಮುಂಜಾನೆ 6 ಗಂಟೆಯಿಂದ ವಿದ್ಯಾರ್ಥಿಗಳು ದಿನದ ವೇಳಾಪತ್ರಿಕೆಯಂತೆ ಬೆಳಗಿನ ವ್ಯಾಯಾಮದೊಂದಿಗೆ ಪ್ರಾರಂಭವಾಗಿ ನಿಗದಿತ ತರಗತಿಗಳಲ್ಲದೇ ಸುಂದರವಾದ ಪರಿಸರದಲ್ಲಿ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ವಿಶೇಷ ತರಗತಿಗಳು, ಗುಂಪು ಅಧ್ಯಯನ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಹಾರ ಬೋಧನೆ, ಯೋಗಾಸನ, ಪಠ್ಯ–ಪಠ್ಯೇತರ ಚಟುವಟಿಕೆಗಳನ್ನು ಮತ್ತು ನಿರಂತರ ಮೌಲ್ಯಮಾಪನದ ಮೂಲಕ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ, ಅವರ ಅರ್ಪಣಾ ಭಾವ, ಪಠ್ಯ ವಿಷಯಗಳ ಜೋತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಸಾಂಸ್ಕೃತಿಕ ಸಂಘ, ಕಾನೂನು ಸಾಕ್ಷರತಾ ಸಂಘ, ಕ್ರೀಡಾ ಸಂಘಗಳ ಮೂಲಕ ವರ್ಷ ಪೂರ್ತಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ಮಾನಸಿಕ, ದೈಹಿಕ ಹಾಗೂ ಸರ್ವಾಂಗೀಣ ಏಳ್ಗೆಗಾಗಿ ಶ್ರಮಿಸುತ್ತಿರುವ "ನಮ್ಮ ಶಾಲೆ ನಮ್ಮ ಹೆಮ್ಮೆ" ಆಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಕಲ್ಲೋಳಿ, ಅರಭಾಂವಿ ಹೋಬಳಿ, ಕಲ್ಲೋಳಿ ಪೋಸ್ಟ್, ಮೂಡಲಗಿ ತಾಲ್ಲೂಕು, ಬೆಳಗಾವಿ – 591224

ಮಂಜೂರಾದ ವರ್ಷ	2007
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–2008
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	13.06–77.43
ನಿವೇಶನದ ವಿಸ್ತೀರ್ಣತೆ	9 ಎಕರೆ 35 ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕಲ್ಲೋಳಿ ಗ್ರಾಮದ ಸಮಸ್ತ ನಾಗರಿಕರ ಆಶೋತ್ತರದಂತೆ, ಸೆಪ್ಟಂಬರ್ 24, 2007 ರಂದು ನಮ್ಮ ಮೊರಾರ್ಜಿ ದೇಸಾಯಿ ವಸತಿ ಶಾಲೆಯು, ಕಲ್ಲೋಳಿ ಗ್ರಾಮದ ಬಾಡಿಗೆ ಕಟ್ಟಡದಲ್ಲಿ 7 ಜನ ಸಿಬ್ಬಂದಿ ಹಾಗೂ 40 ವಿದ್ಯಾರ್ಥಿಗಳಿಂದ ಪ್ರಾರಂಭವಾಯಿತು. ಪ್ರಸ್ತುತ ಶಾಲೆಯಲ್ಲಿ 22 ಜನ ಸಿಬ್ಬಂದಿ ಹಾಗೂ 259 ವಿದ್ಯಾರ್ಥಿಗಳೊಂದಿಗೆ ಮಾನ್ಯ ಜನಪ್ರತಿನಿಧಿಗಳು, ಅಧಿಕಾರಿಗಳು, ವಸತಿ ಶಾಲೆಯ ಸಮಸ್ತ ಸಿಬ್ಬಂದಿ ವರ್ಗ ಹಾಗೂ ಪಾಲಕರ ಸಹಯೋಗದೊಂದಿಗೆ ದಶಮಾನೋತ್ಸವ ಪೂರೈಸಿ, 12ನೇ ವರ್ಷದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

2011–12 ರಿಂದ 2018–19ನೇ ಸಾಲಿನವರೆಗೆ, ಎಲ್ಲಾ ಎಂಟು ವರ್ಷಗಳ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶವು ನೂರಕ್ಕೆ ನೂರರಷ್ಟು ಪಡೆದಿದ್ದು, ಒಟ್ಟು ಪರೀಕ್ಷೆಗೆ ಹಾಜರಾದ 358 ವಿದ್ಯಾರ್ಥಿಗಳಲ್ಲಿ, 242 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ವಿಶೇಷವಾಗಿ 2013–14ನೇ ಸಾಲಿನಿಂದ 2017–18ನೇ ಸಾಲಿನ ವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸತತ 5 ವರ್ಷಗಳ ಕಾಲ ಅತ್ಯುನ್ನತ ಶ್ರೇಣಿಯ ಆಧಾರದ ಮೇಲೆ ವಸತಿ ಶಾಲೆಗಳಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ಇದರಲ್ಲಿ ಡಿ.ದೇವರಾಜ ಅರಸುರವರ ಜನ್ಮದಿನಾಚರಣೆ ಅಂಗವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರುರವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶಕ್ಕಾಗಿ ನೀಡುವ ಸನ್ 2013–14ನೇ ಸಾಲಿನ "ಉತ್ತಮ ವಸತಿ ಶಾಲಾ ಪ್ರಶಸ್ತಿ"ಯನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಪಡೆದಿರುತ್ತದೆ.

ಗ್ರಾಮ ಪಂಚಾಯತ ಕಲ್ಲೋಳಿ ಹಾಗೂ ಕೇಂದ್ರ ಕಛೇರಿ ಸಹಯೋಗದೊಂದಿಗೆ ಶಾಲಾ ಮೈದಾನ ಸಮತಟ್ಟುಗೊಳಿಸಿ ಸುಮಾರು 300ಕ್ಕಿಂತ ಅಧಿಕ ಮರಗಳನ್ನು ನೆಟ್ಟು ಸುಂದರವಾದ ಕೈತೋಟ ನಿರ್ಮಿಸಿ, ಅದರಲ್ಲಿ ಮಹಾನ್ ಪುರುಷರ ಪ್ರತಿಮೆ, ರಾಷ್ಟ್ರೀಯ ಲಾಂಛನ ಹಾಗೂ ಉಪಗ್ರಹ ಮಾದರಿಗಳನ್ನು ನಿರ್ಮಿಸಲಾಗಿದೆ. ಭೋಜನಾಲಯದಲ್ಲಿ ಮಹಾನ್ ಪುರುಷರ ಚಿತ್ರದೊಂದಿಗೆ, ಅವರ ಸಂದೇಶಗಳನ್ನು ಹಾಗೂ ಗಾದೆ ಮಾತುಗಳನ್ನು ಬರೆಯಿಸಲಾಗಿದೆ. ಜಿಲ್ಲಾ ಪಂಚಾಯತ ಅನುದಾನದಲ್ಲಿ ಸಭಾಂಗಣ ನಿರ್ಮಿಸಿ, ಶಾಲಾ ಮೈದಾನದಲ್ಲಿ ವಿದ್ಯಾರ್ಥಿಗಳಿಗೆ ಓದಲು ಸಿಮೆಂಟ ಕುರ್ಚಿಗಳನ್ನು ವ್ಯವಸ್ಥೆ ಮಾಡಲಾಗಿದೆ. ರಾಷ್ಟ್ರೀಯ ಹಬ್ಬಗಳನ್ನು, ಸಹಪಠ್ಯ ಚಟುವಟಿಕೆಗಳನ್ನು ವಿನೂತನವಾಗಿ ಹಾಗೂ ವೈಶಿಷ್ಟ್ಯ ಪೂರ್ಣವಾಗಿ ಆಚರಿಸುತ್ತಾ, ಅಗತ್ಯ ವಾತಾವರಣವನ್ನು ನಿರ್ಮಿಸಿ, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ (ಹಿಂ.ವರ್ಗ–232)

ಹಿರೇನಂದಿ, ಪೊ: ಹಿರೇನಂದಿ, ತಾ:ಗೋಕಾಕ, ಜಿ:ಬೆಳಗಾವಿ–591233

ಮಂಜೂರಾದ ವರ್ಷ	2007–2008
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–08
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.07–74.92
ನಿವೇಶನದ ವಿಸ್ತೀರ್ಣತೆ	6.20 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

"ದಾರುಣಿಯ ನಡಿಗೆಯಲಿ, ಮೇರುವಿನ ಗುರಿಯಿರಲಿ, ಮೇರುವನೆ ಮರೆತಂದೆ, ನಾರಕಕ್ಕೆ ದಾರಿ, ದೂರವಾದೊಡೇನು ಕಾಲು ಕುಂಟೀರಲೇನು?, ಊರ ನನಪೆ ಬಲವು ಮಂಕುತಿಮ್ಮ" ಎಂಬ ಡಿ.ವಿ. ಗುಂಡಪ್ಪನವರ ಮಾತಿನಂತೆ ಒಂದು ದೊಡ್ಡದಾದ ಗುರಿಯನ್ನಿಟ್ಟುಕೊಂಡು ಪುಟ್ಟ ಪುಟ್ಟ ಹೆಜ್ಜೆಯೊಂದಿಗೆ 2007 ಸೆಪ್ಟೆಂಬರ್ 5 ರಂದು ಭಾರತ ಕಂಡ ಶ್ರೇಷ್ಠ ತತ್ವಜ್ಞಾನಿ ರಾಷ್ಟ್ರಪತಿಗಳಲ್ಲಿ ಒಬ್ಬರಾದ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನದಂದು ಈ ವಸತಿ ಶಾಲೆಯು ಆರಂಭವಾಯಿತು. ಬೆಳಗಾವಿ ಜಿಲ್ಲೆಯ ಸುಪ್ರಸಿದ್ಧ ಕರದಂಟಿನ ನಾಡು ಗೋಕಾಕ ತಾಲೂಕಿನ ಹಿರೇನಂದಿ ಗ್ರಾಮದ ಹೊರವಲಯದಲ್ಲಿ ಸ್ಥಾಪಿತವಾಗಿರುವ ಸುಂದರ ಪರಿಸರ ನಿರ್ಮಿಸಿಕೊಂಡು ಸುಮಾರು 600 ವಿವಿಧ ಜಾತಿಯ ಹಣ್ಣು–ಹಂಪಲು, ಆಯುರ್ವೇದಿಕ ಹಾಗೂ ಇತರೆ ಸಸ್ಯಗಳಿದ್ದು ಶಾಲೆಯ ಪ್ರಾಕೃತಿಕ ಸೊಬಗನ್ನು ಹೆಚ್ಚಿಸಿವೆ. ಶಾಲೆಯು ಗೋಕಾಕ–ದಾರವಾಡ ರಾಜ್ಯ ಮುಖ್ಯ ಹೆದ್ದಾರಿಯಿಂದ 3 ಕೀ.ಮೀ ದೂರದಲ್ಲಿ ಸುಮಾರು 6 ಎಕರೆ ವಿಶಾಲವಾದ ಮೈದಾನದಲ್ಲಿ ಹರಡಿಕೊಂಡಿದೆ

ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ ಎಂಬ ನಾಣ್ನುಡಿಯಂತೆ ವಿದ್ಯಾರ್ಥಿಗಳಿಗೆ ಪ್ರತಿದಿನ ಬೆಳಿಗ್ಗೆ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಯೋಗಾಸನ ಪ್ರಾಣಾಯಾಮ, ಎರೋಬಿಕ್ಸ ಇತರೆ ಕ್ರೀಡೇಗಳ ತರಬೇತಿ ನೀಡಲಾಗುತ್ತದೆ. ನಿಯಮಿತವಾದ ವೇಳಾಪಟ್ಟಿಯೊಂದಿಗೆ ಶಾಲೆಯ ಪಠ್ಯ ಚಟುವಟಿಕೆಗಳು ಪ್ರಾರಂಭವಾಗಿ ವಿಶೇಷ ತರಗತಿ, ಪರಿಹಾರ ಬೋಧನೆ, ಪ್ರತಿದಿನ ರಾತ್ರಿ STUDY HOUR ಮೂಲಕ ಕಲಿಕೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತದೆ.

ನಮ್ಮ ನಾಡಿನ ಸಾಂಸ್ಕೃತಿಕ ಹಿರಿಮೇಯನ್ನು ಹೆಚ್ಚಿಸಲು ಅನೇಕ ಸಮಾಜ ಸುಧಾರಕರು ಶಿಕ್ಷಣ ಪ್ರೇಮಿಗಳು, ಭಾರತ ಮಾತೆಯ ಶ್ರೇಷ್ಠ ಪುತ್ರನಾದ ಸ್ವಾಮಿ ವಿವೇಕಾನಂದ, ಸಂವಿಧಾನ ಶಿಲ್ಪಿ ಡಾ:ಬಿಆರ್ ಅಂಬೇಡ್ಕರ, ಮಹಾತ್ಮಾ ಗಾಂಧಿ ಇನ್ನು ಮುಂತಾದ ಮಹನೀಯರ ಸಂದೇಶಗಳನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸಿ ಕಾರ್ಯಪ್ರವರ್ತರಾಗುವಂತೆ ಪ್ರೇರೆಪಿಸುವುದು ನಮ್ಮ ಶಾಲೆಯ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳಲ್ಲಿ ದೇಶ ಪ್ರೇಮ, ನೈತಿಕ ಮಟ್ಟ, ಸಮಯ ಪ್ರಜ್ಞೆ, ಕರ್ತವ್ಯ ನಿಷ್ಠೆ, ಮಾನವೀಯ ಮೌಲ್ಯಗಳನ್ನು ಬೇಳೆಸಲು ಶಾಲೆಯ ಸಮಸ್ತ ಸಿಬ್ಬಂಧಿ ಶ್ರಮಿಸುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮಂಡೋಳಿ (ಪ.ಜಾತಿ–233), (ಬೆಳಗಾವಿ ಗ್ರಾಮಾಂತರ) ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ 590008

ಮಂಜೂರಾದ ವರ್ಷ	2008–09
ಶೈಕ್ಷಣಿಕ ಕಾರ್ಯಾರಂಭ ವರ್ಷ	2008–09
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	74.454725–15.822278
ನಿವೇಶನದ ವಿಸ್ತೀರ್ಣತೆ	10 ಎಕರೆ 07 ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕರ್ನಾಟಕದ ವಾಯುವ್ಯ ಭಾಗದ ಗಡಿಯಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ನೆಲೆಸಿರುವ ಸುಂದರ ಹಸಿರುಮಯ ಜಿಲ್ಲೆ ಬೆಳಗಾವಿ. ಬಿದಿರುನಾಡು ಎಂದು ಕರೆಯಲ್ಪಡುವ ಬೆಳಗಾವಿ ನಗರದ ಕೇಂದ್ರ ಬಸ್ ನಿಲ್ದಾಣದಿಂದ 12ಕಿ.ಮೀ ದೂರದಲ್ಲಿರುವ ಗ್ರಾಮ ಮಂಡೋಳಿ. ಈ ಗ್ರಾಮದ ಹೊರಭಾಗದ ವಿಶಾಲವಾದ ಭೂ–ಪ್ರದೇಶದಲ್ಲಿ ನಿರ್ಮಿಸಲ್ಪಟ್ಟ ವಸತಿ ಶಾಲೆಯೇ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಡೋಳಿ.

ವಸತಿ ಶಾಲೆಯ ಹಳೆಯ ವಿದ್ಯಾರ್ಥಿಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮೀಸಲು ಪೊಲೀಸ (K.S.R.P) ಪಡೆಯಲ್ಲಿ ಪೇದೆಯಾಗಿ, ಮೂವರು ವಿದ್ಯಾರ್ಥಿಗಳು ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬುರಾಜು ಕಂಪನಿ ನಿಯಮಿತ ಹುಬ್ಬಳ್ಳಿಯಲ್ಲಿ (ಊಇಖಅಔಒ) ಕಿರಿಯ ಮಾರ್ಗದಾಳು ಆಗಿ, ಓರ್ವ ಹಳೆಯ ವಿದ್ಯಾರ್ಥಿ ಡಿ. ದೇವರಾಜ ಅರಸು ಮೆಟ್ರಿಕ ನಂತರದ ವಸತಿ ನಿಲಯದಲ್ಲಿ ಅಡುಗೆ ಸಹಾಯಕನಾಗಿ ಹಾಗೂ ಇನ್ನೊರ್ವ ಹಳೆಯ ವಿದ್ಯಾರ್ಥಿ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ವಸತಿ ಶಾಲೆಯ ವಿದ್ಯಾರ್ಥಿಗಳ ಮತ್ತೊಂದು ಸಾಧನೆಗಳಲ್ಲೊಂದಾಗಿದೆ. ಇಷ್ಟೆ ಅಲ್ಲದೇ ವಸತಿ ಶಾಲೆಯ ಹಳೆಯ ವಿದ್ಯಾರ್ಥಿಗಳಲ್ಲಿ ಕೆಲವರು ಎಂ.ಬಿ.ಬಿ.ಎಸ್ ಹಾಗೂ ಇಂಜಿನಿಯರಿಂಗ್ ಪದವಿ ವ್ಯಾಸಾಂಗ ಮಾಡುತ್ತಿರುವುದು ವಸತಿ ಶಾಲೆಯ ಸಾಧನೆಯನ್ನು ಹೆಚ್ಚಿಸಿದೆ.

ಪ್ರಸ್ತುತ ವಸತಿ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿರುವ ಮಕ್ಕಳ ಮಾನಸಿಕ/ದೈಹಿಕ ಆರೋಗ್ಯ ತಪಾಸಣೆಗಾಗಿ ವಿಶೇಷವಾಗಿ ಕಾಳಜಿ ವಹಿಸುವುದರ ಜೊತೆಜೊತೆಗೆ ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ಸ್ಪರ್ಧಾ ಯುಗದ ಶೈಕ್ಷಣಿಕ ಪದ್ದತಿಗಳನುಸಾರ ಸ್ವಚ್ಛಂದ ಪರಿಸರದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಕಲಿಕೆಗಾಗಿ ಹತ್ತು ಹಲವು ನೂತನ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ವಸತಿ ಶಾಲೆಯ ಹಾಗೂ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ದಿಗಾಗಿ ವಸತಿ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗವು ಶ್ರಮಿಸುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಸುಟ್ಟಟ್ಟಿ(ಕುಡಚಿ) ತಾ: ರಾಯಬಾಗ ಜಿ: ಬೆಳಗಾವಿ ಪೀನ್ ಕೊಡ್ –591217

ಮಂಜೂರಾದ ವರ್ಷ	2008
ಶೈಕ್ಷಣಿಕ ಕಾರ್ಯಾರಂಭ ವರ್ಷ	2009
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.56–74.87
ನಿವೇಶನದ ವಿಸ್ತೀರ್ಣತೆ	15 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	420

ವಿವರಣೆ

ಉತ್ತರ ಕರ್ನಾಟಕದ ನದಿಗಳಲ್ಲೊಂದಾದ ಕೃಷ್ಣಾ ನದಿಯ ತೀರದಲ್ಲಿರುವ ಪವಿತ್ರಯಾತ್ರಾ ಸ್ಥಳವಾದ ಚಿಂಚಲಿ ಮಾಯಕ್ಕಾ ದೇವಸ್ಥಾನದಿಂದ 7 ಕಿ.ಮೀ ದೂರದಲ್ಲಿರುವ ಇಂಚಗೇರಿ ಮಠದ ಪಕ್ಕದಲ್ಲಿರುವ ವಿಶಾಲವಾಗಿ ಹರಡಿಕೊಂಡಿರುವ ಈ ಭಾಗದ ನೆಚ್ಚಿನ ಶಾಲೆಗಳಲ್ಲೊಂದಾದ ನಮ್ಮ ಹೆಮ್ಮೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸುಟ್ಟಟ್ಟಿ(ಕುಡಚಿ).

ಬೆಳಗಾವಿ ಜಿಲ್ಲೆಯ (ಚಿಕ್ಕೋಡಿ ಶೈಕ್ಷಣಿಕಜಿಲ್ಲೆ) ರಾಯಬಾಗ ತಾಲ್ಲೂಕಿನ ಸುಟ್ಟಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 15 ಎಕರೆ ವಿಸ್ತೀರ್ಣ ಹೊಂದಿದೆ. ಪ್ರತಿ ವರ್ಷವು ಜಿಲ್ಲೆಯ ಬಹುತೇಕ ತಾಲ್ಲೂಕಗಳಿಂದ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ, ಚೆಂದಾಗಿ ವಿದ್ಯಾರ್ಜನೆ ಮಾಡುತ್ತಿರುವ ಸರ್ವಾಜನಾಂಗದ ಶಾಂತಿಯತೋಟ ಈ ಶಾಲೆ.

ಸೂರ್ಯೋದಯದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿಯು ದೈಹಿಕ ಶಿಕ್ಷಣ ಶಿಕ್ಷಕಿಯರ ಮಾರ್ಗದರ್ಶನದೊಂದಿಗೆ ಯೋಗಾಸನ, ಪ್ರಾಣಾಯಾಮ, ಸರಳ ವ್ಯಾಯಾಮ, ಕ್ರೀಡಾ ಚಟುವಟಿಕೆಗಳು ಮಕ್ಕಳಲ್ಲಿ ಉತ್ತಮ ಚೈತನ್ಯವನ್ನು ತಂಬುತ್ತಿವೆ.

ನಿಗದಿತ ತರಗತಿಗಳಲ್ಲದೆ ಬೆಳಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನದಲ್ಲಿ ಮಕ್ಕಳು ತೊಡಗಿಕೊಳ್ಳುತ್ತಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ, ವಿಶೇಷ ತರಗತಿಗಳ ಮೂಲಕ ನೀಡಲಾಗುತ್ತದೆ. ಶಿಕ್ಷಕರ ಪರಿಣಾಮಕಾರಿ ಬೋಧನೆ ಅವರ ಜ್ಞಾನಾರ್ಜನೆ ಮನೋಭಾವನೆಯಿಂದ ವಿಷಯಗಳ ಜೊತೆಗೆ ಪಠ್ಯತ್ತರ ಚಟುವಟಕೆಗಳಲ್ಲಿ ಮಕ್ಕಳು ತೊಡಗಿಕೊಳ್ಳುವಂತೆ ಇಲ್ಲಿಯಿರುವ ಭಾಷಾ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಹೆಣ್ಣು ಮಕ್ಕಳ ಸುರಕ್ಷಾ ಸಮಿತಿ, ಕ್ರೀಡಾ ಸಂಘ, ಇತ್ಯಾದಿ ವಿವಿಧ ಸಂಘಗಳ ಮೂಲಕ ಮಕ್ಕಳಲ್ಲಿ ನಾಯಕತ್ವ ಮನೋಭಾವನೆ ಮೂಡಿಸಲಾಗುತ್ತಿದೆ. ಒಟ್ಟಾರೆಯಾಗಿ ನಮ್ಮ ಉನ್ನತೀಕರಿಸಿದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸುಟ್ಟಟ್ಟಿ(ಕುಡಚಿ) ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ದಾಪುಗಾಲು ಇಡುತ್ತಿದೆ ಎಂದು ಹೇಳಲು ನಮ್ಮೆಲ್ಲರಿಗೆ ಒಂದು ಹೆಮ್ಮೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಹಾಲಭಾವಿ (ಎಸ್.ಟಿ.–235), ತಾ/ಜಿ: ಬೆಳಗಾವಿ. ಪಿನ್ ಕೋಡ್–591156

ಮಂಜೂರಾದ ವರ್ಷ	2008
ಶೈಕ್ಷಣಿಕ ಕಾರ್ಯಾರಂಭ ವರ್ಷ	2008–09
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	74.46 32373 16.033787
ನಿವೇಶನದ ವಿಸ್ತೀರ್ಣತೆ	4.ಎಕರೆ.15. ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕನ್ನಡ ನಾಡಿನ ಕೆಚ್ಚೆದೆಯ ಬೀಡು, ಶೂರರ ನಾಡು, ವೀರವನಿತೆಯರ ತವರೂರು, ಕುಂದಾನಗರಿಯ ಹೆಗ್ಗಳಿಕೆ ಮತ್ತು ಕರದಂಟಿನ ಸವಿಯ ಬೆಳಗಾವಿ ಜಿಲ್ಲೆ ಹಾಗೂ ತಾಲೂಕಿನ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ 6 ಕಿ.ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ (ಪುಣೆ– ಬೆಂಗಳೂರು) NH-04 ಕ್ಕೆ 1.ಕಿ.ಮೀ ದೂರದಲ್ಲಿ ನಿಸರ್ಗ ರಮಣೀಯ ತಾಣದಲ್ಲಿ ಒಟ್ಟು 4.ಎಕರೆ.15 ಗುಂಟೆ ಜಾಗದಲ್ಲಿ ನವೀನ ರೀತಿಯ ಸುಂದರವಾದ ಕಟ್ಟಡ ಹೊಂದಿರುವ ಶಾಲೆ, **"ಮೊರಾರ್ಜಿ ದೇಸಾಯಿ ವಸತಿ ಶಾಲೆ,ಹಾಲಭಾವಿ."**

2012–13 ರ ಮೊದಲ ಎಸ್.ಎಸ್.ಎಲ್.ಸಿ. ತಂಡದಿಂದ ಮಕ್ಕಳ ಫಲಿತಾಂಶ ಉನ್ನತೀಕರಣಕ್ಕಾಗಿ ನಿರಂತರವಾಗಿ ವೇಳಾಪಟ್ಟಿಯಂತೆ ವಿಷಯ ಶಿಕ್ಷಕರುಗಳಿಂದ ಮುಂಜಾನೆ 8.00 ರಿಂದ 9.00 ಗಂಟೆ, ಸಾಯಂಕಾಲ 5.00 ರಿಂದ 6.00 ಗಂಟೆ ವಿಶೇಷ ತರಗತಿಗಳು. ಪ್ರತಿ 15 ದಿನಗಳಿಗೊಮ್ಮೆ ಪಠ್ಯಾಧಾರಿತ ರಸಪ್ರಶ್ನೆ ಸ್ಪರ್ಧೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ತಂಡಗಳಾಗಿಸಿ ದತ್ತು ಪಡೆಯುವುದು, ನಿಗದಿತ ವೇಳೆಯಲ್ಲಿ ಪಠ್ಯ ಪೂರ್ಣಗೊಳಿಸಿ ಉಳಜಣಿ ಮಾಡುವುದು, ಮಕ್ಕಳಿಗೆ ಕ್ಲಿಷ್ಟವೆನಿಸಿದ ಅಂಶಗಳ ಸರಳೀಕರಣ, ಹಳೆ ಪ್ರಶ್ನೆ ಪತ್ರಿಕೆಗಳನ್ನು ಉತ್ತರಿಸಲು ರೂಢಿಸುವುದು, ಕೈ–ಬರಹಕ್ಕೆ ಆದ್ಯತೆ ನೀಡುವುದು, ಗುಂಪು ಅಧ್ಯಯನ ಮತ್ತು ಚರ್ಚೆ ಹೀಗೆ ಬೇರೆ–ಬೇರೆ ವಿಧಾನಗಳನ್ನು ಒಳಗೊಂಡ ಕ್ರಿಯಾ ಯೋಜನೆಯಂತೆ ಮಕ್ಕಳ ಅಭ್ಯುದಯಕ್ಕಾಗಿ ಶ್ರಮಿಸಿದ್ದು ನಮ್ಮಗಳ ಹೆಮ್ಮೆ.

ಕಾಲಕಾಲಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನೀತಿ–ನಿಯಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತ, ಗ್ರಾಮೀಣ–ಬಡ ಸಮಾಜದ ಮಕ್ಕಳ ಪ್ರತಿಭೆಯನ್ನು ಸರಕಾರದ ಅಭಿಲಾಷೆಯಂತೆ ಉದ್ದೀಪನಗೊಳಿಸಿ ಅವರ ಬಾಳಿಗೆ ಬೆಳಕು ನೀಡಿ, ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಮಕ್ಕಳನ್ನು ರೂಪಿಸಿದ್ದು; ನಮ್ಮ ಶಾಲಾ ಕೀರ್ತಿಯ ಕೀರಿಟ – ಶೈಕ್ಷಣಿಕ, ಕ್ರೀಡಾ ಹಾಗೂ ಸಾಂಸ್ಕೃತಿಕ ಸಾಧನಾ ಗರಿಗಳಿಂದ ಅಲಂಕರಿಸಿಕೊಂಡಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಗವಾಣ (ಬಿಸಿ 236), ತಾ: ಚಿಕ್ಕೋಡಿ ಜಿ: ಬೆಳಗಾವಿ ಪಿನಕೋಡ್–591237

ಮಂಜೂರಾದ ವರ್ಷ	2007–08
ಶೈಕ್ಷಣಿಕ ಕಾರ್ಯಾರಂಭ ವರ್ಷ	2007–08
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16–21–49, 74–25–00
ನಿವೇಶನದ ವಿಸ್ತೀರ್ಣತೆ	6 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕುಂದಾ ನಗರಿ ಬೇಳಗಾವಿ ಜಿಲ್ಲೇಯ ಚಿಕ್ಕೋಡಿ ತಾಲೂಕೀನ ನಿಪ್ಪಾನಿಯಿಂದ 6 ಕೀ ಮೀ ಪೂರ್ವದಲ್ಲಿ ನಮ್ಮ ವಸತಿ ಶಾಲೆಯು ರಾಷ್ಟ್ರೀಯ ಹೆದ್ದಾರಿ 4 ರ ಪಕ್ಕ ಇರುತ್ತದೆ.

ಸೂರ್ಯನ ಆಗಮನದೊಂದಿಗೆ ಹಕ್ಕಿಗಳ ಕಲರವದೊಂದಿಗೆ ನಮ್ಮ ಮಕ್ಕಳು ಕಲರವ ಮಾಡುತ್ತ ತಮ್ಮ ಅಧ್ಯಯನದಲ್ಲಿ ತೊಡಗಿಕೊಳ್ಳುತ್ತಾರೆ. ವೇಳಾಪಟ್ಟಿಯಂತೆ ತರಗತಿಗಳಲ್ಲದೆ, ಉಪನ್ಯಾಸಕರ ವಿಶೇಷ ತರಗತಿ, ದತ್ತು ಮಕಳ ಯೋಜನೆ, ಹಾಗೂ ಪರಿಹಾರ ಬೋಧನೆ ತರಗತಿಗಳು ನಡೆಯುತ್ತವೆ. ನಿರಂತರ ಮೌಲ್ಯಮಾಪನ , ಹಾಗೂ ವೈಯಕ್ತಿಕ ಕಾಳಜಿ ವಹಿಸಲಾಗುತ್ತದೆ. ಉಪನ್ಯಾಸಕರ ಪರಿಶ್ರಮ ಸಮರ್ಪಣಾ ಭಾವ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಿಕೆ ಇವೆಲ್ಲವೂ ಮಕ್ಕಳಿಗೆ ಕಲಿಕೆಯನ್ನು ಸಂತೋಷಕರ ಕಾರ್ಯವನ್ನಾಗಿಸಿದೆ. ಮಕ್ಕಳ ಏಕಾತಾನ್ಮತೆಯ ಕಲಿಕೆಯನ್ನು ವಿಭಿನ್ನ ಮಾರ್ಗದಲ್ಲಿ ತೊಡಗಿಕೊಳ್ಳುವಂತೆ ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳನ್ನು ನಿರಂತರ ಕ್ರಿಯಾಶೀಲರನ್ನಾಗಿ ಮಾಡಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮದಭಾವಿ ಗ್ರಾಮ, ಅನಂತಪೂರ ಹೋಬಳಿ, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ

ಮಂಜೂರಾದ ವರ್ಷ	2008–09
ಶೈಕ್ಷಣಿಕ ಕಾರ್ಯಾರಂಭ ವರ್ಷ	2008–09
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.21–74.25
ನಿವೇಶನದ ವಿಸ್ತೀರ್ಣತೆ	9.31 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಅನಂತಪೂರ ಹೋಬಳಿಯ ಮದಭಾವಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸುಮಾರು 9ಎಕರೆ 31 ಗುಂಟೆ ಭೂಭಾಗವನ್ನು ಹೊಂದಿದೆ. ಪ್ರತೀ ವರ್ಷವೂ ಜಿಲ್ಲೆಯ ವಿವಿಧ ಜಾತಿ,ಮತ ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರು ಒಂದಾಗಿ ವಿದ್ಯಾರ್ಜನೆ ಮಾಡುತ್ತಿದ್ದಾರೆ.ಈ ಶಾಲೆ ಇದುವರೆಗೆ ಹೊರಬಂದ 07 SSLC Batch ಗಳಲ್ಲಿ 04 Batch ಗಳು ಶೇಕಡಾ 100% ಫಲಿತಾಂಶ ದಾಖಲಿಸಿರುತ್ತವೆ. 2018–19 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ ಒಟ್ಟು 32 ವಿದ್ಯಾರ್ಥಿಗಳಲ್ಲಿ 08 Distinction ಹಾಗೂ 24 First class ಉತ್ತೀರ್ಣಗೊಂಡಿರುತ್ತಾರೆ.

ಸೂರ್ಯೋದಯದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10 ಗಂಟೆಯ ವರೆಗೆ ನಿರಂತರವಾಗಿ ಸಾಗುತ್ತದೆ. ನಿಗದಿತ ತರಗತಿಗಳಲ್ಲದೆ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸರಾಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತೀ ಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಲಾಗುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ,ಅವರ ಅರ್ಪಣಾ ಭಾವ,ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ.ಒಟ್ಟಾರೆಯಾಗಿ ವಿದ್ಯಾರ್ಥಿಗಳ ಸರ್ವೋತ್ತಮ ಬೆಳವಣಿಗೆಗಾಗಿ ಎಲ್ಲಾ ಸಿಬ್ಬಂದಿ ವರ್ಗ ಶ್ರಮಿಸಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ಹಿಂದುಳಿದ ವರ್ಗಗಳ ವಸತಿ ಶಾಲೆ

ವಕ್ಕುಂದ–(238) ನೇಕಾರ ಓಣಿಯ ಹತ್ತಿರ ವಕ್ಕುಂದ, ತಾ: ಬೈಲಹೊಂಗಲ, ಜಿ: ಬೆಳಗಾವಿ

ಮಂಜೂರಾದ ವರ್ಷ	2008
ಶೈಕ್ಷಣಿಕ ಕಾರ್ಯಾರಂಭ ವರ್ಷ	2008–09
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	15.77–74.89
ನಿವೇಶನದ ವಿಸ್ತೀರ್ಣತೆ	10.00 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆಯ ಗಂಡುಮೆಟ್ಟಿದ ನಾಡಾದ ಬೈಲಹೊಂಗಲ ತಾಲೂಕಿನಿಂದ 6 ಕಿ.ಮೀ. ದೂರದಲ್ಲಿ ಸಾಹಿತ್ಯಿಕ ಹಿನ್ನಲೆಯುಳ್ಳ ತಿರುಳ್ಗನ್ನಡನಾಡಾದ ವಕ್ಕುಂದ ಗ್ರಾಮವಿದೆ. ಸದರಿ ಗ್ರಾಮದ ಮಲಪ್ರಭೆಯ ದಡದಲ್ಲಿ ಸುಂದರವಾದ, ಭವ್ಯವಾದ ಕಟ್ಟಡ ತಲೆ ಎತ್ತಿ ನಿಂತು ವಿದ್ಯಾರ್ಥಿಗಳನ್ನು ಜ್ಞಾನಾರ್ಜನೆಗಾಗಿ ಕೈಬೀಸಿ ಕರೆಯುತ್ತಿದೆ.

ವಸತಿ ಶಾಲೆಯಲ್ಲಿ ಪಠ್ಯಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳು ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ವಿದ್ಯಾರ್ಥಿಗಳು ಸಾಧನೆಯ ಛಾಪು ಒತ್ತಿದ್ದಾರೆ. ಇಲ್ಲಿಯವರೆಗೆ ವಸತಿ ಶಾಲೆಯಿಂದ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯಮಟ್ಟದಲ್ಲಿ ಒಟ್ಟು 04 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಜ್ಯಮಟ್ಟದಲ್ಲಿ ಒಟ್ಟು 02 ಹಾಗೂ ಜಿಲ್ಲಾ ಮಟ್ಟದಲ್ಲಿ 10 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ವಸತಿ ಶಾಲೆಯಿಂದ ಒಬ್ಬ ವಿದ್ಯಾರ್ಥಿ ರಾಜ್ಯಮಟ್ಟದ ಚಿಣ್ಣರ ಕ್ರೀಡೆಯಲ್ಲಿ ಭಾಗವಹಿಸಿ ಶಾಲೆಗೆ ಕೀರ್ತಿ ತಂದು ಕೊಟ್ಟಿರುತ್ತಾನೆ.

ಪ್ರಾಂಶುಪಾಲರ ಮುಖಂಡತ್ವದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಉತ್ಸಾಹಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗವಿದೆ. ವಸತಿ ಶಾಲೆಯಲ್ಲಿರುವ ವಿವಿಧ ಸಂಘಗಳಿಂದ ವರ್ಷವಿಡಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ವಸತಿ ಶಾಲೆಯ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಲಾಗುತ್ತಿದೆ. ಶಾಲೆಯಲ್ಲಿ ಈಗಾಗಲೇ 250 ಸಸಿಗಳನ್ನು ನೆಟ್ಟು ಉತ್ತಮವಾಗಿ ಪಾಲನೆ–ಪೋಷಣೆ ಮಾಡಲಾಗುತ್ತಿದೆ. ಮುಂಬರುವ ದಿನಗಳಲ್ಲಿ ವಸತಿ ಶಾಲೆಯನ್ನು ಸುಂದರ ತಾಣವಾಗಿ ಮಾರ್ಪಡಿಸಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಅಗತ್ಯವಿರುವ ಉತ್ತಮ ವಾತಾವರಣವನ್ನು ನಿರ್ಮಾಣ ಮಾಡಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚನ್ನಮ್ಮಾ ಆಂಗ್ಲ ಮಾಧ್ಯಮ ಬಾಲಕಿಯರ ವಸತಿ ಶಾಲೆ

ಸಂಕೋನಟ್ಟಿ ಗ್ರಾಮ, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ

ಮಂಜೂರಾದ ವರ್ಷ	2009
ಶೈಕ್ಷಣಿಕ ಕಾರ್ಯಾರಂಭ ವರ್ಷ	2009–10
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	15.66–74.27
ನಿವೇಶನದ ವಿಸ್ತೀರ್ಣತೆ	9.30 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮುರಘೇಂದ್ರ ಶಿವಯೋಗಿಗಳ ತಪೋಭೂಮಿ ಹಾಗೂ ಜತ್ತ ಜಾಂಬೋಟಿ ರಸ್ತೆಗೆ ಕೇವಲ 1 ಕಿಲೋ ಮೀಟರ ದೂರದಲ್ಲಿನ ಪ್ರಕೃತಿಯ ಮಡಿಲಿನಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಶಾಲೆ ಕಿತ್ತೂರ ರಾಣಿ ಚನ್ನಮ್ಮಾ ಆಂಗ್ಲ ಮಾಧ್ಯಮ ಬಾಲಕಿಯರ ವಸತಿ ಶಾಲೆ ಸಂಕೋನಟ್ಟಿ. (ಹಾಲಿ–ಚಮಕೇರಿಮಡ್ಡಿ) ತಾ॥ ಅಥಣಿ

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸಂಕೋನಟ್ಟಿ ಹೋಬಳಿಯ ಸಂಕೋನಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 9 ಎಕರೆ 30 ಗುಂಟೆ ಭೂಭಾಗವನ್ನು ಹೋಂದಿದೆ. ಇಲ್ಲಿ ಪ್ರತಿ ವರ್ಷ ಎಲ್ಲಾ ಜಿಲ್ಲೆಗಳ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ ಯಾವುದೇ ಭೇದಭಾವಗಳಿಲ್ಲದೆ ವಿದ್ಯಾರ್ಜನೆ ಮಾಡುತ್ತಿರುವುದು ನಾಳಿನ ದೇಶದ ಭವ್ಯ ಭವಿಷತ್ತಿನ ಆಶಾಕೀರಣವಾಗಿದ್ದಾರೆ.

2013–14 ನೇ ಸಾಲಿನಿಂದ ಪ್ರಾರಂಭವಾದ ಎಸ್.ಎಸ್.ಎಲ್.ಸಿ ಬ್ಯಾಚ್‌ಗಳಲ್ಲಿ ನಮ್ಮ ಶಾಲೆ ವಿದ್ಯಾರ್ಥಿನಿಯರು ಬಹಳಷ್ಟು ಸಾಧನೆಯನ್ನು ಮಾಡಿದ್ದಾರೆ. ಅದರಲ್ಲೂ 2016–17ನೇ ಸಾಲಿನ ವಿದ್ಯಾರ್ಥಿನಿಯಾದ ಕುಮಾರಿ. ಪ್ರಮೀಳಾ ಮಹಾದೇವ ಭಡಕೆ 625 ಕ್ಕೆ 614 ಅಂಕಗಳನ್ನು ಪಡೆದು ರಾಜ್ಯದಲ್ಲಿ ನಡೆಯುವ ಒಟ್ಟು ವಸತಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಟಾಪ್–10 ದಲ್ಲಿ ಸ್ಥಾನವನ್ನು ಸಂಪಾದಿಸಿದ್ದಾಳೆ. ಇದಲ್ಲದೇ 2018–19ನೇ ಸಾಲಿನಲ್ಲಿ ನಮ್ಮ ಶಾಲೆಯ ಒಟ್ಟು ವಿದ್ಯಾರ್ಥಿನಿಯರು 45 ಇದ್ದು, ಅದರಲ್ಲಿ 22 ವಿದ್ಯಾರ್ಥಿನಿಯರು ಡಿಸ್ಟಿಂಗ್ಷನ್ ಮತ್ತು 23 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಪಾಸಾಗಿರುತ್ತಾರೆ.

ನಿಗದಿತ ತರಗತಿಗಳಲ್ಲದೇ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋದನೆ, ವಿಶೇಷ ತರಗತಿಗಳನ್ನು ನಡೆಸುವುದು, ದತ್ತು ಯೋಜನೆ, ಸದನ ಶಿಕ್ಷಕರನ್ನು ನೇಮಿಸುವುದರ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸರಾಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ

ನಾಗರಾಳ ಮು/ಪೊ. ನಾಗರಾಳ ತಾ/ ರಾಯಬಾಗ ಜಿ/ಬೆಳಗಾವಿ

ಮಂಜೂರಾದ ವರ್ಷ	2009
ಶೈಕ್ಷಣಿಕ ಕಾರ್ಯಾರಂಭ ವರ್ಷ	2009–10
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	15.66–74.27
ನಿವೇಶನದ ವಿಸ್ತೀರ್ಣತೆ	10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ರಾಯಬಾಗ ಪಟ್ಟಣದ ನಾಗರಿಕರ ಆಶೋತ್ತರದಂತೆ ಮೇ 5 2009 ರಂದು ನಮ್ಮ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯು ರಾಯಬಾಗ ಪಟ್ಟಣದ ಹೊರವಲಯದ ಬಾಡಿಗೆ ಕಟ್ಟಡದಲ್ಲಿ 5 ಜನ ಸಿಬ್ಬಂದಿ ಹಾಗೂ 25 ವಿದ್ಯಾರ್ಥಿಗಳಿಂದ ಪ್ರಾರಂಭವಾಯಿತು. ಪ್ರಸ್ತುತ ಶಾಲೆಯಲ್ಲಿ 21 ಜನ ಸಿಬ್ಬಂದಿ ಹಾಗೂ 231 ವಿದ್ಯಾರ್ಥಿನಿಯರೊಂದಿಗೆ ಮಾನ್ಯ ಜನ ಪ್ರತಿನಿಧಿಗಳು, ಅಧಿಕಾರಿಗಳು, ವಸತಿ ಶಾಲೆಯ ಸಮಸ್ತ ಸಿಬ್ಬಂದಿ ಹಾಗೂ ಪಾಲಕರ ಸಹಯೋಗದೊಂದಿಗೆ ದಶಮಾನೋತ್ಸವದ ಸನಿಹದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

2013–14 ರಿಂದ 2018–19 ನೇ ಸಾಲೀನವರೆಗೆ ಎಲ್ಲ ಆರು ವರ್ಷಗಳ ಎಸ್ ಎಸ್ ಎಲ್ ಸಿ ವಾರ್ಷಿಕ ಫಲಿತಾಂಶವು ಸುಮಾರು ಶೆಕಡಾ 96 ಪ್ರತಿಶತ ಪಡೆದಿದ್ದು, ಒಟ್ಟು ಪರೀಕ್ಷೆಗೆ ಹಾಜರಾದ 186 ವಿದ್ಯಾರ್ಥಿನಿಯರಲ್ಲಿ 74 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 90 ಕಿಂತ ಹೆಚ್ಚು ಅಂಕಗಳಿಸಿದ ವಸತಿ ಶಾಲೆಗಳ ವಿದ್ಯಾರ್ಥಿನಿಯರಿಗೆ ಬೆಳಗಾವಿ ಜಿಲ್ಲಾಧಿಕಾರಿಗಳ ಸಹಯೋಗದಿಂದ ದಾನಿಗಳು ನೀಡುವ ತಲಾ 10000/– ಪ್ರೋತ್ಸಾಹ ಧನವನ್ನು 2014–15 ನೇ ಸಾಲಿನಿಂದ 2017–18 ನೇ ಸಾಲಿನವರೆಗೆ ಒಟ್ಟು 30 ವಿದ್ಯಾರ್ಥಿನಿಯರು ನಮ್ಮ ಶಾಲೆಯಿಂದ ಪಡೆದಿರುತ್ತಾರೆ ಎಂದು ತಿಳಿಸಿಲು ಹೆಮ್ಮೆಯೆನಿಸುತ್ತದೆ.

ರಾಯಬಾಗ ವಲಯದ ಅರಣ್ಯ ಇಲಾಖೆ ಸಹಯೋಗದೊಂದಿಗೆ ಶಾಲಾ ಸಂಕೀರ್ಣದಲ್ಲಿ 250 ಕಿಂತ ಅಧಿಕ ಮರಗಳನ್ನು ನೆಟ್ಟು ಸುಂದರವಾದ ಕೈತೋಟ ನಿರ್ಮಿಸಲಾಗಿದೆ. ರಾಷ್ಟ್ರೀಯ ಹಬ್ಬಗಳನ್ನು ಸಹಪಠ್ಯ ಚಟುವಟಿಕೆಗಳನ್ನು ವಿನೂತನವಾಗಿ ಹಾಗೂ ವೈಶಿಷ್ಟ್ಯ ಪೂರ್ಣವಾಗಿ ಆಚರಿಸುತ್ತ, ಅಗತ್ಯ ವಾತಾವರಣವನ್ನು ನಿರ್ಮಿಸಿ, ವಿದ್ಯಾರ್ಥಿನಿಯರ ಸರ್ವತೋಮುಖ ಬೆಳವಣಿಗಿಗೆ ಶ್ರಮಿಸಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ

ಬೈಲಹೊಂಗಲ ಹಿಂದುಗಡೆ ಬೈಲಹೊಂಗಲ–591102 ತಾ। ಬೈಲಹೊಂಗಲ ಜಿ।ಬೆಳಗಾವಿ

ಮಂಜೂರಾದ ವರ್ಷ	2009
ಶೈಕ್ಷಣಿಕ ಕಾರ್ಯಾರಂಭ ವರ್ಷ	2009–10
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	15.66–74.27
ನಿವೇಶನದ ವಿಸ್ತೀರ್ಣತೆ	10.03 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ನಮ್ಮ ವಸತಿ ಶಾಲೆಯು, ಗಂಡು ಮೆಟ್ಟಿದ ನಾಡಾದ ಬೈಲಹೊಂಗಲ ತಾಲೂಕಿನಲ್ಲಿ, ಬೆಳಗಾವಿಗೆ ಹೋಗುವ ಹೆದ್ದಾರಿ ರಸ್ತೆಯ ಎಡ ಬಾಗದಲ್ಲಿ 2 ಕಿ.ಮಿ ದೂರದಲ್ಲಿನ, ಪ್ರಕೃತಿಯ ಮಡಿಲಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಶಾಲೆ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ, ಬೈಲಹೊಂಗಲ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ವ್ಯಾಪ್ತಿಯಲ್ಲಿ ಸುಮಾರು 10 ಎಕರೆ 03 ಗುಂಟೆ ಭೂಭಾಗವನ್ನು ಹೊಂದಿದೆ. ಪ್ರತಿ ವರ್ಷವೂ ರಾಜ್ಯದ ಬಹುತೇಕ ಜಿಲ್ಲೆಗಳ ವಿವಿಧ ಜಾತಿ, ಮತ. ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ, ಚೆಂದಾಗಿ ವಿದ್ಯಾರ್ಜನೆ ಮಾಡುತ್ತಿರುವ "ಸರ್ವಜನಾಂಗದ ಶಾಂತಿಯಯೋಟ" ಈ ಶಾಲೆ.

ಸದರಿ ವಸತಿ ಶಾಲೆಯಲ್ಲಿ 2009–10 ರಿಂದ 2019–20 ರವರೆಗೆ ಒಟ್ಟು 06 ಎಸ್.ಎಸ್.ಎಲ್.ಸಿ ಬ್ಯಾಚನ ಒಟ್ಟು 273 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದು ಫಲಿತಾಂಶ ಶೇ100% ರಷ್ಟು ಆಗಿದೆ. ಉತ್ತಮ ಗುಣಮಟ್ಟದ ಫಲಿತಾಂಶ ಬಂದಿರುವುದು ಶೈಕ್ಷಣಿಕ ಗುಣಮಟ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಬೆಳಿಗ್ಗಿನ ಜಾವ ಸೂರ್ಯೋ ದೇವನ ನಮಸ್ಕಾರದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ಒಳ್ಳೆಯ ಸವಿಚಾರದಿಂದ ನಗುವಿನ ಚಿಲುಮೆಯಿಂದ ಪ್ರಾರಂಬಗೊಳ್ಳುತ್ತದೆ. ದೈಹಿಕ ಶಿಕ್ಷಕರ ಯೋಗಾಬ್ಯಾಸದ ಜೊತೆಗೆ ಶುಶ್ರೂಷಕಿಯರ ಸಲಹೆ ಸೂಚನೆಗಳೊಂದಿಗೆ ಬೆಳಗ್ಗಿನ ಉಪಹಾರದಿಂದ ರಾತ್ರಿ ಊಟದ ಸಮಯದವರೆಗೆ, ನಿರಂತರವಾಗಿ ಸಾಗುವ ವಿದ್ಯಾರ್ಥಿಗಳ ದಿನಚರಿ ಈ ಶಾಲೆಯ ಇನ್ನೊಂದು ವಿಶೇಷತೆ.

ನಮ್ಮ ವಸತಿ ಶಾಲೆಯ ಪ್ರಾಂಶುಪಾಲರು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರ ಜೊತೆಗೂಡಿ, ಪ್ರತಿದಿನದ ವಿದ್ಯಾರ್ಥಿಗಳ ತರಗತಿವಾರು ವಿದ್ಯಾಬ್ಯಾಸದ ಮತ್ತು ವಿದ್ಯಾರ್ಥಿಗಳಿಗೆ ಆತ್ಮ ಬಲವನ್ನು ಹೆಚ್ಚಿಸುವ ಕಾರ್ಯದಲ್ಲಿ ತೊಡಗಿರುತ್ತಾರೆ. ಅದೇ ರೀತಿ ನಮ್ಮ ವಸತಿ ಶಾಲೆ ನಿಲಯಪಾಲಕರು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ, ಮಕ್ಕಳ ಉಪಹಾರ ಮತ್ತು ಊಟದ ವ್ಯವಸ್ಥೆಯಲ್ಲಿ ಆಗಲಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಲ್ಲಿ ಆಗಲಿ ಯಾರಿಗೂ ಯಾವುದರಲ್ಲು ಕಿಂಚಿತ್ತು ಸಣ್ಣ ಪುಟ್ಟ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆ

ಸಾಲಹಳ್ಳಿ (ಎಸ್.ಸಿ –445) ತಾ :ರಾಮದುರ್ಗ ಜಿ:ಬೆಳಗಾವಿ –591130

ಮಂಜೂರಾದ ವರ್ಷ	2009–10
ಶೈಕ್ಷಣಿಕ ಕಾರ್ಯಾರಂಭ ವರ್ಷ	2009–10
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.06–75.23
ನಿವೇಶನದ ವಿಸ್ತೀರ್ಣತೆ	9 ಎಕರೆ 30ಗುಂಟೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆಯ ಪೂರ್ವಭಾಗದಲ್ಲಿ ರಾಜ್ಯ ಹೆದ್ದಾರಿ ಸಂಖ್ಯೆ–20 ರ ಮೇಲೆವಿರುವ ಕಟ್ಟಕಡೆಯ ಹಳ್ಳಿ ಸಾಲಹಳ್ಳಿ. ಇದು ಮುರಗೋಡ ಮಹಾಂತ ಶಿವಯೋಗಿಗಳ ಜನ್ಮಭೂಮಿಯಾಗಿದ್ದು, ಈ ಗ್ರಾಮದಲ್ಲಿ ಕಾಮನಕೊಪ್ಪ, ಗುಡಕಟ್ಟಿ, ಚನ್ನಟ್ಟಿ, ಬೂದನೂರು, ಕದಾಂಪೂರ ಎಂಬ 5 ಹಳ್ಳಿಗಳು ಸಾಲಾಗಿವಿರುವದರಿಂದ ಸಾಲಹಳ್ಳಿ ಎಂದು ಹೆಸರು ಬಂದಿದೆ. ಇಲ್ಲಿ ಹಿಂದೂ, ಮುಸ್ಲಿಂ, ಜೈನ್ ಇತ್ಯಾದಿ ಧರ್ಮಗಳ ಜನ ಸಾಮರಸ್ಯದಿಂದ ಬಾಳುತ್ತಿದ್ದು, ಈ ಗ್ರಾಮವು ಯಾವುದೇ ಪಟ್ಟಣಕ್ಕೆ ಕಡಿಮೆವಿಲ್ಲದಂತೆ ಬೆಳವಣಿಗೆ ಹೊಂದುತ್ತಿದೆ.

ರಾಮದುರ್ಗ ತಾಲೂಕಿನ ಚಂದರಗಿ ಹೋಬಳಿಯಲ್ಲಿ ಬರುವ ಈ ಗ್ರಾಮದಲ್ಲಿ ನಮ್ಮ ವಸತಿ ಶಾಲೆಯು 2009 ನವೆಂಬರ–01 ರಂದು ಕಾರ್ಯರಂಭಗೊಂಡು ಕಾರ್ಯನಿರ್ವಹಿಸುತ್ತಿದೆ. ಈ ಭಾಗದ ಪ.ಜಾತಿ, ಪ.ವರ್ಗದ ಪ್ರತಿಭಾವಂತ ವಿದ್ಯಾರ್ಥಿನಿಯರ ಬಾಳಿಗೆ ಆಶಾಕಿರಣವಾಗಿದೆ. ಸುಮಾರು 10 ಎಕರೆ ಪ್ರದೇಶದಲ್ಲಿ ನೆಲೆ ನಿಂತಿರುವ ನಮ್ಮ ವಸತಿ ಶಾಲೆಯು ಹಚ್ಚ ಹಸುರಿನ ಪ್ರಕೃತಿಯ ಮಧ್ಯೆ ನಿಂತು ಶಿಕ್ಷಣಾಸಕ್ತರನ್ನು ಕೈ–ಬೀಸಿ ಕರೆತ್ತಿದೆ. ಐದು ಅಡಿ ಎತ್ತರದ ಪೀಠದ ಮೇಲೆ ನಿಂತಿರುವ ವೀರ ರಾಣಿ ಕಿತ್ತೂರು ಚನ್ನಮ್ಮ, ಕಲ್ಪನ ಚಾವ್ಲಾ, ಮದರ್ ತೆರೇಸಾ ಅಲ್ಲದೆ ಗಾಂಧೀಜಿ, ಅಂಬೇಡ್ಕರ, ಬಸವೇಶ್ವರ, ವಿವೇಕಾನಂದ, ನೆಹರೂಜಿ ಮತ್ತು ರಾಧಾಕೃಷ್ಣನ್‌ರ ಪ್ರತಿಮೆಗಳು ಮಕ್ಕಳಿಗೆ ಸ್ಫೂರ್ತಿ ನೀಡುವಂತಿವೆ.

ಸ್ಥಳೀಯ ಸಂಪನ್ಮೂಲ ಕ್ರೋಢೀಕರಣದಿಂದ ರೂಪಿಸಲ್ಪಟ್ಟ ನಮ್ಮ ವಸತಿ ಶಾಲೆಯ ಕಂಪ್ಯೂಟರ್ ಪ್ರಯೋಗಾಲಯ, ಸಂಗೀತ ಪ್ರಯೋಗಾಲಯ ಮತ್ತು ಡಿಜಿಟಲ್ ಗ್ರಂಥಾಲಯ ನೂರರು ಮಕ್ಕಳ ಜ್ಞಾನದ ಹಸಿವನ್ನು ತಣಿಸುತ್ತಿವೆ.

ಈತನಕ ಸುಮಾರು 651 ವಿದ್ಯಾರ್ಥಿಗಳು ದಾಖಲಾಗಿ ವ್ಯಾಸಂಗ ಮಾಡಿದ್ದು 2013–14 ನೇ ಸಾಲಿನಲ್ಲಿ ಮೊದಲನೇ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬ್ಯಾಚ್ ಪರೀಕ್ಷೆ ಎದುರಿಸಿದ್ದು ಈಲ್ಲಿಯವರೆಗೆ 6 ಬ್ಯಾಚ್‌ಗಳು ಶಾಲೆಯಿಂದ ಹೊರಗೆ ಹೋಗಿದ್ದು ಪ್ರತಿವರ್ಷ 100 % ಫಲಿತಾಂಶ ದಾಖಲಿಸುತ್ತಾ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಯಲ್ಲಿ ನಿರತವಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ (ಪ.ವ)

ಖನಗಾಂವ ತಾ: ಗೋಕಾಕ ಜಿ: ಬೆಳಗಾವಿ

ಮಂಜೂರಾದ ವರ್ಷ	10–12–2009
ಶೈಕ್ಷಣಿಕ ಕಾರ್ಯಾರಂಭ ವರ್ಷ	2009
ಕಟ್ಟಡದ ಸ್ವರೂಪ	ಸ್ವಂತ ಕಟ್ಟಡ
ಅಕ್ಷಾಂಶ–ರೇಖಾಂಶ	16.025715–74.822019
ನಿವೇಶನದ ವಿಸ್ತೀರ್ಣತೆ	9.35 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕರ್ನಾಟಕದ ಎರಡನೇಯ ರಾಜದಾನಿ, ಕುಂದಾನಗರಿ ಬೆಳಗಾವಿ ಜಿಲ್ಲೆಯ ಅತ್ಯದ್ಭುತವಾದ ಸವಿರುಚಿಗೆ ಪ್ರಸಿದ್ದವಾದ ಕರದಂಟು ಖ್ಯಾತಿಯ ಗೋಕಾಕ ತಾಲೂಕಿನ ಸುಂದರವಾದ ಪ್ರಕೃತಿ ಮಡಿಲಲ್ಲಿನ ಅಂದವಾದ ಚುಕ್ಕೆಯಂತೆ ಕಂಗೊಳಿಸುವ ಖನಗಾಂವ ಗ್ರಾಮವು ಈ ಭಾಗದ ಭಕ್ತರ ಆರಾಧ್ಯ ದೈವ ಜಾಗೃತ ದೇವಿ ಖನ್ನಮ್ಮ ನೆಲೆಸಿರು ಪುಣ್ಯ ಕ್ಷೇತ್ರ. ಈ ಕ್ಷೇತ್ರವು ಕೊಲ್ಹಾಪುರದ ಮಹಾಲಕ್ಷ್ಮೀ, ಕೊಲ್ಹಾಪುರದಮ್ಮ ಎಂದು ಎಲ್ಲಡೆಯೂ ಭಕ್ತಸಾಗರವನ್ನು ಹೋದಿರುವ ಈ ಸಾಕ್ಷಾತ ದೇವಿಯು ನೆಲೆಸಿರುವ ಮತ್ತೊಂದು ಪುಣ್ಯಕ್ಷೇತ್ರವೇ ಈ ಸ್ಥಳ ಆದ್ದರಿಂದ ಈ ದೇವಿಯ ಹೆಸರಿನಿಂದ ಈ ಗ್ರಾಮವನ್ನು ಖನಗಾಂವ ಎಂದು ಕರೆಯಲಾಗುತ್ತಿದೆ. ಇದು ಜಿಲ್ಲಾ ಕೇಂದ್ರ ದಿಂದ 45ಕೀ.ಮಿ. ಹಾಗೂ ತಾಲೂಕು ಕೇಂದ್ರದಿಂದ 16ಕಿ.ಮಿ ದೂರದಲ್ಲಿದೆ.

ಇಲ್ಲಿನ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯು 2009ರಲ್ಲಿ ಈ ಭಾಗದ ಜನಪ್ರೀಯ ಶಾಸಕರಾದ ಮಾನ್ಯ ಶ್ರೀ ರಮೇಶ ಜಾರಕಿಹೋಳಿ ಇವರಿಂದ ಅಡಿಗಲ್ಲು ಸಮಾರಂಭ ನಂತರ ಉದ್ಘಾಟನೆಗೊಂಡು ಅಲ್ಲಿಂದ ಇಲ್ಲಿಯವರೆಗೆ ಈ ಭಾಗದಲ್ಲಿ ಶೈಕಣಿಕವಾಗಿ ಹೆಸರುವಸಿಯಾದ ಅತ್ಯುತ್ತಮ ಶಾಲೆಗಳಲ್ಲಿ ಇದು ಒಂದು ಎಂದು ಗುರುತಿಸಿಕೊಂಡಿದೆ.

ಶಾಲೆ ಪ್ರಾರಂಭದಿಂದ ಇಲ್ಲಿವರೆಗೆ ಸತತವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 100ಕ್ಕೆ 100 ಫಲಿತಾಂಶ ಹೊಂದಿದೆ. 2017/18ರಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ ಎರಡನೇಯ ಅತ್ಯತ್ತಮ ವಸತಿ ಶಾಲೆ ಎಂಬ ಹೆಗ್ಗಳಿಕೆ .2017–18ರಲ್ಲಿ ರಾಜ್ಯಮಟ್ಟದಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ. 2017/18ರಲ್ಲಿ ಪ್ರತಿಭಾ ಕಾರಂಜಿ ಹಾಗೂ ಚದುರಂಗ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಸ್ಥಾನ ಇವು ನಮ್ಮ ವಸತಿ ಶಾಲೆಯ ಸಾಧನೆಗಳು.

ಶಾಲೆ ಪ್ರಾರಂಭದಿಂದ ಇಲ್ಲಿವರೆಗೆ ಸತತವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 100ಕ್ಕೆ 100 ಫಲಿತಾಂಶ ಹೊಂದಿದೆ. 2017/18ರಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ ಎರಡನೇಯ ಅತ್ಯತ್ತಮ ವಸತಿ ಶಾಲೆ ಎಂಬ ಹೆಗ್ಗಳಿಕೆ .2017–18ರಲ್ಲಿ ರಾಜ್ಯಮಟ್ಟದಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ. 2017/18ರಲ್ಲಿ ಪ್ರತಿಭಾ ಕಾರಂಜಿ ಹಾಗೂ ಚದುರಂಗ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಸ್ಥಾನ ಇವು ನಮ್ಮ ವಸತಿ ಶಾಲೆಯ ಸಾಧನೆಗಳು.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ

ಕೆ.ಶಿವಾಪೂರ (ಎಸ್.ಟಿ),447 ತಾ: ಸವದತ್ತಿ ಜಿಲ್ಲಾ ಬೆಳಗಾವಿ

ಮಂಜೂರಾದ ವರ್ಷ	2009
ಶೈಕ್ಷಣಿಕ ಕಾರ್ಯಾರಂಭ ವರ್ಷ	2009
ಕಟ್ಟಡದ ಸ್ವರೂಪ	ಸ್ವಂತಕಟ್ಟಡ
ಅಕ್ಷಾಂಶ–ರೇಖಾಂಶ	16.025715–74.822019
ನಿವೇಶನದ ವಿಸ್ತೀರ್ಣತೆ	9.35 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕುಂದಾನಗರಿ ಎಂದೇ ಪ್ರಸಿದ್ದಿ ಹೊಂದಿರುವ ಬೆಳಗಾವಿ ಜಿಲ್ಲೆಯ ಸವದತ್ತಿ ಎಂಬ ಪುಣ್ಯಕ್ಷೇತ್ರದಲ್ಲಿ ಜಗನ್ಮಾತೆ ಶ್ರೀ ರೇಣುಖಾ ಯಲ್ಲಮ್ಮದೇವಿ ಕ್ಷೇತ್ರದಲ್ಲಿ ಸನ್ 2009–10 ನೇ ಸಾಲಿನಲ್ಲಿ ಗ್ರಾಮೀಣ ಪ್ರತಿಭಾವಂತ ಬಡ ಹೆಣ್ಣು ಮಕ್ಕಳಿಗೊಸ್ಕರ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಕೋಟೂರು ಶಿವಾಪೂರಲ್ಲಿ ಸ್ಥಾಪಿತಗೊಂಡಿತು. 2014–15 ನೇ ಸಾಲಿನಲ್ಲಿ ಶ್ರೀ ಪರಮಾನಂದ ನೆಲೆಸಿರುವ ಸ್ಥಳದಿಂದ 2 ಕಿ.ಮೀ ದೂರದಲ್ಲಿರುವ ಸ್ವಂತ ಕಟ್ಟಡದಲ್ಲಿ ಜ್ಞಾನ ದಾಸೋಹ ನಿಡುತ್ತಾ ಬಂದಿದೆ.

ಸೂರ್ಯೋದಯದಿಂದ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10.30 ರವರೆಗೆ ನಿರಂತರವಾಗಿ ಸಾಗುತ್ತದೆ.ಬೆಳಗಿನ ತಣ್ಣಗಿನ ಪ್ರಕೃತಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಮಾರ್ಗದರ್ಶನದೊಂದಿಗೆ ವ್ಯಾಯಾಮ,ಯೋಗಾ ಅಬ್ಯಾಸ, ಪ್ರಾಣಾಯಾಮಗಳು ಹಾಗೂ ಗುಂಪು ಆಟಗಳ ಅಬ್ಯಾಸ ನಡೆಯುತ್ತವೆ. ಕ್ರೀಡಾ ವಿಭಾಗದಲ್ಲಿ ಚೆಸ್, ಓಟದ ಸ್ಪರ್ದೆಯಲ್ಲಿ ಜಿಲ್ಲಾ ಮಟ್ಟಕೆ ಹಾಗೂ 2019–20ನೇ ಸಾಲಿನಲ್ಲಿ ಯೋಗ ಸ್ಪರ್ದೆಯು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿರುವುದು ಶಾಲೆಯ ಶೈಕ್ಷಣಿಕ ಪ್ರಗತಿಗೆ ಸಾಕ್ಷಿಯಾಗಿದೆ.

ಮಕ್ಕಳಿಗೆ ಮೆನುಚಾರ್ಟಗೆ ಅನುಗುನವಾಗಿ ಶುಚಿಯಾದ ಊಟ, ಶುದ್ದ ಕುಡಿಯುವ ನೀರು, ಉತ್ತಮವಾದ ಬೆಡ್,ಹಾಸಿಗೆ,ಹೊದಿಕೆ,ಸೋಪ್ ಕಿಟ್, ಸಮವಸ್ತ್ರ , ಶೂಸ್, ಔಷಧೋಪಚಾರ, ಆಟದ ಮೈದಾನ, ಜಿಮ್, ವಿಜ್ಞಾನ ಪ್ರಯೋಗಾಲಯ, ಸಿಸಿ ಕ್ಯಾಮರ,ಗ್ರಂಥಾಲಯದ ಸೌಲಬ್ಯಗಳನ್ನು ಹೊಂದಿದೆ. ಪ್ರಾಚಾರ್ಯರ ಮಾರ್ಗದರ್ಶನದಲ್ಲಿ ಎಲ್ಲ ಶಿಕ್ಷಕ ಸಿಬ್ಬಂದಿ ವರ್ಗ ಮಕ್ಕಳ ಶ್ರೇಯೋಭಿವೃದ್ದಿಗೆ ಶ್ರಮಿಸುತ್ತಿದ್ದಾರೆ. ಶಿಕ್ಷಕರ ಪರಿಣಾಮಕಾರಿ ಭೋದನೆ, ಅರ್ಪಣಾಭಾವ, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಿದ್ದಾರೆ. ಎಲ್ಲಾ ವಿಷಯಗಳ ಸಂಘ, ಪರಿಸರ,ಆರೋಗ್ಯ,ಕಾನೂನು ಸುರಕ್ಷತಾ,ಕ್ರೀಡಾ,ಮಹಿಳಾ ಸುರಕ್ಷಾ ಸಂಘಗಳ ಮೂಲಕ ವರ್ಷಪೂರ್ತಿ ವಿವಿದ ಚಟುವಟಿಕೆಗಳನ್ನು ಮಾಡುತ್ತಾ ಶಾಲೆಯ ಪ್ರಗತಿಗೆ ಶ್ರಮಿಸುತ್ತಿದ್ದಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರು ರಾಣಿ ಚೆನ್ನಮ್ಮಾ ವಸತಿ ಶಾಲೆ

ಹುಕ್ಕೇರಿ (ಕ್ಯಾರಗುಡ್ಡ), ಹುಕ್ಕೇರಿ ಹೋಬಳಿ, ಹುಕ್ಕೇರಿ ಪೋಸ್ಟ್, ಹುಕ್ಕೇರಿ ತಾಲ್ಲೂಕು, ಬೆಳಗಾವಿ – 591309

ಮಂಜೂರಾದ ವರ್ಷ	2009–2010
ಶೈಕ್ಷಣಿಕ ಕಾರ್ಯಾರಂಭ ವರ್ಷ	2010–2011
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.243400–74.631887
ನಿವೇಶನದ ವಿಸ್ತೀರ್ಣತೆ	5 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕುಂದಾ ನಗರಿ ಬೆಳಗಾವಿ(ವೇಣುಗ್ರಾಮ) ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹುಕ್ಕೇರಿಯ ಕ್ಯಾರಗುಡ್ಡದ 5 ಎಕರೆ ವಿಸ್ತೀರ್ಣ ಹೊಂದಿರುವ ನಿಸರ್ಗದ ಮಡಿಲಲ್ಲಿ ನಿರ್ಮಿತಗೊಂಡಿರುವ ಕಿತ್ತೂರ ರಾಣಿ ಚನ್ನಮ್ಮಾ ವಸತಿ ಶಾಲೆಯು ವಿಶ್ವವಿಖ್ಯಾತ ಪ್ರವಾಸಿ ತಾಣಗಳಾದ ಗೋಕಾಕ ಜಲಪಾತ ಹಾಗೂ ಹಿಡಕಲ್ ಜಲಾಶಯದಿಂದ ಸುಮಾರು 20 ಕಿ.ಮೀ. ಅಂತರದಲ್ಲಿರುವ ಶೇ. 70 ರಷ್ಟು ಪರಿಶಿಷ್ಟ ಪಂಗಡ ಮತ್ತು 30 ರಷ್ಟು ಇತರ ವರ್ಗಗಳಿಂದ ಜಿಲ್ಲಾ ಮಟ್ಟದ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆಯಾದ ವಿದ್ಯಾರ್ಥಿನಿಯರ ಅಚ್ಚುಮೆಚ್ಚಿನ ಶಾಲೆಯಾಗಿರುತ್ತದೆ

ಪ್ರಾತಃಕಾಲ 6 ಗಂಟೆಯಿಂದ ಪ್ರಾರಂಬವಾಗುವ ವಿದ್ಯಾರ್ಥಿನಿಯರ ದೈನಂದಿನ ಚಟುವಟಿಗಳಿಂದ ನಿರಂತರವಾಗಿ ರಾತ್ರಿ 10 ಗಂಟೆಗಳ ವರೆಗೆ ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಇತರೆ ಸಹ ಶಿಕ್ಷಕರ ಮಾರ್ಗದರ್ಶನದೊಂದಿಗೆ ವಿವಿಧ ಬಗೆಯ ತಾಳಬದ್ಧ ಚಟುವಟಿಕೆಗಳು, ಪ್ರಾಣಾಯಾಮ, ಯೋಗಾಸನ ಹಾಗೂ ವಿವಿಧ ತಂಡಗಳ ರಚನೆ ಮಾಡಿ ಶಾಲಾಂತರ್ಗತ ಸ್ಪರ್ಧೆಗಳನ್ನು ಏರ್ಪಡಿಸುವುದು ಹಾಗೂ ಓಳಾಂಗಣ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗುವುದು ಒಂದು ವಿಶೇಷತೆ.

ನಿರ್ಧಿಷ್ಟ ವರ್ಗಗಳಲ್ಲದೆ ಮುಂಜಾನೆ ಮತ್ತು ಸಾಯಂಕಾಲ ವಿಷಯ ಹಾಗೂ ಭಾಷಾ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯನಕ್ಕಾಗಿ ಸಮಯವನ್ನು ನಿಗದಿಪಡಿಸಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿನಿಯರಿಗೆ ವಿಶೇಷ ಕಾಲಜಿ ವಹಿಸಿ ಅವರ ಶ್ರಯೋಭಿವೃದ್ಧಿಗಾಗಿ ಶ್ರಮಿಸಲಾಗುತ್ತದೆ.

ವಿವಿಧ ವಿಷಯ ಸಂಪನ್ಮೂಲ ಶಿಕ್ಷಕರಿಂದ ವಿದ್ಯಾರ್ಥಿನಿಯರಿಗೆ ವಿಶೇಷ ಬೋಧನೆ ಮಾಡಲಾಗುವುದು. ಪ್ರತಿ ವರ್ಷ ಸುವರ್ಣ ಸೌಧ ಬೆಳಗಾವಿಯಲ್ಲಿ ಜರಗುವ ಚಳಿಗಾಲ ಅದಿವೇಶನಕ್ಕೆ ಮತ್ತು ಆಶಾಕಿರಣ ಪ್ಲಾನಿಟೋರಿಯಂ ಹಾಗೂ ಜವಹಾರಲಾಲ್ ನೆಹರು ಮೆಡಿಲ್ ಕಾಲೇಜಿನ ಪ್ಯಾಥೋಲಾಜಿ ಲ್ಯಾಬ್‌ಗಳಿಗೆ 9 ಮತ್ತು 10ನೇ ತರಗತಿ ವಿದ್ಯಾರ್ಥಿನಿಯರಿಗೆ ಸಂದರ್ಶನ ಮಾಡುವುದು ಒಂದು ವಾಡಿಕೆ

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮದಭಾವಿ (ಪ,ಜಾ)551 ತಾ:ಅಥಣಿ ಜಿ:ಬೆಳಗಾವಿ 591232

ಮಂಜೂರಾದ ವರ್ಷ	2016–17
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ರಹಿತ ವಸತಿ ಶಾಲೆ ಕಟ್ಟಡ
ಅಕ್ಷಾಂಶ–ರೇಖಾಂಶ	ನಿವೇಶನ ಮಂಜುರಾತಿ ಆಗಿರುವದಿಲ್ಲ
ನಿವೇಶನದ ವಿಸ್ತೀರ್ಣತೆ	ಇಲ್ಲಾ
ಪ್ರವೇಶ ಮಂಜೂರಾತಿ ಸಂಖ್ಯೆ	ಇಲ್ಲಾ

ವಿವರಣೆ

"ಪ್ರತಿಭೆಗೆ ಪುರಸ್ಕಾರ" ಎಂಬ ಧ್ಯೇಯ ವಾಕ್ಯದೊಂದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ 2017–18 ರ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ವಸತಿ ಶಾಲೆಗಳಲ್ಲಿ ನಮ್ಮ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮದಭಾವಿ ತಾ:ಅಥಣಿ ಕೂಡ ಒಂದು.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಅನಂತಪುರ ಹೋಬಳಿಯ ಮದಭಾವಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ 2017–18 ನೇ ಸಾಲಿನಲ್ಲಿ ಹೊಸದಾಗಿ 50 ವಿದ್ಯಾರ್ಥಿಗಳೊಂದಿಗೆ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭವಾಗಿ ಪ್ರಸ್ತುತ ಅಥಣಿ ತಾ: ಮುರಗುಂಡಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬಾಡಿಗೆ ರಹಿತವಾಗಿ ನಮ್ಮ ಶಾಲೆಯು 6 ರಿಂದ 8 ನೇ ತರಗತಿಯ ಒಟ್ಟು 151 ವಿದ್ಯಾರ್ಥಿಗಳೊಂದಿಗೆ ರಾಷ್ಟ್ರಾಭಿಮಾನ, ಭಾವೈಕ್ಯತೆ, ಶಿಸ್ತು, ಪರಿಸರ ಜಾಗೃತಿ, ಸ್ವ ಸಹಾಯ, ನಾಯಕತ್ವ ಗುಣಗಳು ಮತ್ತು ಮಾನವಿಯ ಮೌಲ್ಯಗಳು ಹಾಗು ವೃತ್ತಿ ಜೀವನದ ಕೌಶಲ್ಯಗಳ ಬಗ್ಗೆ ಕಲಿಸುತ್ತಾ ನಡೆದಿದೆ. ನಮ್ಮ ವಸತಿ ಶಾಲೆಯು ಬೆಳಗಿನ ಜಾವ 5 ಘಂಟೆಯಿಂದ ದೈನಂದಿನ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿಯು 'ಸದೃಡವಾದ ದೇಹದಲ್ಲಿ, ಸದೃಡವಾದ ಮನಸ್ಸು' ಎಂಬಂತೆ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಬೆಳಗಿನ ಪ್ರಾರ್ಥನೆ, ಯೋಗ, ವ್ಯಾಯಾಮದೊಂದಿಗೆ, ಹಾಗೂ ಎಲ್ಲ ಶಿಕ್ಷಕರ ಮಾರ್ಗದರ್ಶನದಲ್ಲಿ ಆಟ ಪಾಠಗಳೊಂದಿಗೆ ಪೌಷ್ಟಿಕ ರುಚಿಕರ ಆಹಾರ ಸೇವನೆಯೊಂದಿಗೆ ನಮ್ಮ ವಸತಿ ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ರಾತ್ರಿ 10.30 ರವರೆಗೆ ನಿರಂತರವಾಗಿ ಸಾಗುತ್ತದೆ.

ಪ್ರತಿ ಶುಕ್ರವಾರ ಸಾಯಂಕಾಲ ಮಕ್ಕಳ ಪ್ರತಿಭೆಯನ್ನು ಗುರುತಿಸಲು ಶಾರದಾ ಪೂಜೆಯೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳು (ಜಾನಪದ ನೃತ್ಯ, ನಾಟಕಗಳು, ಮಿಮಿಕ್ರಿ, ಹಾಸ್ಯ ಚಟಾಕಿಗಳು, ಚಿತ್ರಕಲೆ, ಭಾವಗೀತೆಗಳು, ಚಲನಚಿತ್ರ ಗೀತೆಗಳು, ಪೇಪರ ಕಟಿಂಗ್ ಕಲೆ, ಕಥೆ ಮುಂತಾದವುಗಳು) ನಡೆಯುತ್ತವೆ. ಅದೇ ರೀತಿ ಪ್ರತಿ ಶನಿವಾರ ಶಾಲಾ ಅವಧಿಯ ನಂತರ ರಸಪ್ರಶ್ನೆ ಕಾರ್ಯಕ್ರಮ ಜರಗುತ್ತದೆ ಮತ್ತು ಶಾಲಾ ಪರಿಸರ ವಸತಿ ನಿಲಯ ಹಾಗು ಸ್ವಯಂ ಸ್ವಚ್ಚತೆಯ ಬಗ್ಗೆ ಜಾಗೃತರನ್ನಾಗಿಸುವದು. ಪ್ರತಿದಿನ ಶಾಲಾ ಅವಧಿಯ ನಂತರ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಕಲಿಕಾ ತರಗತಿಗಳು ಹಾಗೂ ಪರಿಹಾರ ಭೋಧನಾ ತರಗತಿಗಳು ನಡೆಯುತ್ತವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಶ್ರೀಮತಿ ಇಂದಿರಾಗಾಂಧಿ ವಸತಿ (ಹಿಂ ವ) ಶಾಲೆ

ತುಮ್ಮರಗುದ್ದಿ (ಹುದಲಿ) ಹಿರೇ ಬಾಗೆವಾಡಿ ಹೋಬಳಿ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ.– 590016

ಮಂಜೂರಾದ ವರ್ಷ	2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–2018
ಕಟ್ಟಡದ ಸ್ವರೂಪ	ಬಾಡಿಗೆ ರಹಿತ
ಅಕ್ಷಾಂಶ–ರೇಖಾಂಶ	74.66–15.98
ನಿವೇಶನದ ವಿಸ್ತೀರ್ಣತೆ	10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	200

ವಿವರಣೆ

ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಹುದಲಿಯ ಗಂಗಾಧರರಾವ ದೇಶಪಾಂಡೆಯವರ ಜನ್ಮಭೂಮಿ ಹಾಗೂ ಕರ್ಮಭೂಮಿಯಲ್ಲಿ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ ತುಮ್ಮರಗುದ್ದಿ (ಹುದಲಿ) ವಸತಿ ಶಾಲೆ ಎಂಬ ಜ್ಞಾನ ದೇಗುಲವು ಪ್ರಾರಂಭವಾಯಿತು.ಗಾಂಧಿಜಿಯವರ ಹುದಲಿಯ ವಾಸ್ತವ್ಯದ ಸವಿನೆನಪಿಗಾಗಿ ವಿಶಾಲ ಹಾಗೂ ಸುಂದರವಾದ ಗಾಂಧೀ ಭವನ ಎಂಬ ಸ್ಮಾರಕವಿದೆ. ಈ ಸ್ಮಾರಕ ಭವನದ ಪಕ್ಕದಲ್ಲಿಯೇ ನಮ್ಮ ಶಾಲೆಯ ಕಟ್ಟಡವಿದ್ದು 2074 ಚ.ಮೀ ವಿಸ್ತೀರ್ಣದಲ್ಲಿ ಬಾಡಿಗೆ ರಹಿತವಾಗಿ ನಡೆಯುತ್ತಿದೆ.

2016 ರಲ್ಲಿ ಕರ್ನಾಟಕ ಸರ್ಕಾರ ಬೆಂಗಳೂರು ರವರು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಹೊಸದಾಗಿ ಪ್ರಾರಂಭಿಸಲು ಅನುಮತಿಯನ್ನು ನೀಡಿದರು.2017–18ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ರವರ ಅನುಮತಿಯೊಂದಿಗೆ ಜೂನ 20ರಿಂದ ಹುದಲಿಯಲ್ಲಿ 6ನೇ ತರಗತಿಯಿಂದ 50 ವಿದ್ಯಾರ್ಥಿಗಳೊಂದಿಗೆ ಪ್ರಾರಂಭಿಸಲಾಯಿತು. ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಿಲ್ಲದಿದ್ದರೂ ಕೂಡ ಉತ್ತಮ ಗುಣಮಟ್ಟದ ಉತ್ಸಾಹಿ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.ಉತ್ತಮ ಆಟದ ಮೈದಾನದ ಕೊರತೆ ಇದ್ದರೂ ಕೂಡ ನಮ್ಮ ಶಾಲೆಯ ವಿದ್ಯಾರ್ಥಿಗಳು ಕೇವಲ ಮೂರು ಶೈಕ್ಷಣಿಕ ವರ್ಷದ ಅವಧಿಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಈ ವರೆಗೆ 30 ವಿದ್ಯಾರ್ಥಿಗಳು ಭಾಗವಹಿಸಿ ಕ್ರೀಡಾ ಕ್ಷೇತ್ರದಲ್ಲಿ ಭರವಸೆಯ ಮಿಂಚನ್ನು ಹರಿಬಿಟ್ಟಿದ್ದಾರೆ.ವಸತಿ ಶಾಲೆಯಲ್ಲಿರುವ ವಿವಿಧ ಭಾಷಾ ಸಂಘಗಳು,ಗಣಿತ ಸಂಘ,ವಿಜ್ಞಾನ ಸಂಘ,ಕ್ರೀಡಾ ಸಂಘ,ಸಾಂಸ್ಕೃತಿಕ ಸಂಘಗಳ ಮುಖಾಂತರ ವರ್ಷವಿಡೀ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಂಬಂದಿಸಿದ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ವಸತಿ ಶಾಲೆಯ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಲಾಗುತ್ತಿದೆ.

ಮುಂಬರುವ ದಿನಗಳಲ್ಲಿ ಈ ಶಿಕ್ಷಣ ತಾಣ ತಮ್ಮದೇ ಆದಂತ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮುಖಾಂತರ ಜಿಲ್ಲೆ,ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಹ ಮಹತ್ತರ ಗುರಿಯನ್ನು ಹೊಂದಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ–553

ಪಟ್ಟಣಕುಡಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮಂಜೂರಾದ ವರ್ಷ	2012–13
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	16.42–74.52
ನಿವೇಶನದ ವಿಸ್ತೀರ್ಣತೆ	8 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	160

ವಿವರಣೆ

ರಾಜ್ಯ ಹೆದ್ದಾರಿ ಮುಧೋಳ ನಿಪ್ಪಾಣಿ ಮುಖ್ಯ ರಸ್ತೆಯಿಂದ 1 ಕಿ.ಮಿಟರ ಹತ್ತಿರ ಇರುವ ಧಾರ್ಮಿಕ ಪುಣ್ಯಕ್ಷೇತ್ರವಾದ ಶ್ರೀ ಶಾಂತಿಗಿರಿ ಹತ್ತಿರ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪಟ್ಟಣಕುಡಿ (ಕುಪ್ಪಣವಾಡಿ).

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಕುಪ್ಪಣವಾಡಿ (ಪಟ್ಟಣಕುಡಿ)ಇಲ್ಲಿಗೆ ಬಾಡಿಗೆ ಕಟ್ಟಡದಲ್ಲಿ ಪ್ರಸ್ತುತ ನಡೆಯುತ್ತಿದೆ. ಸುಸಜ್ಜಿತ ಕಟ್ಟಡ ಒಳಗೊಂಡಿದೆ. ಪ್ರತಿ ವರ್ಷಬೆಳಗಾವಿ ಜಿಲ್ಲೆಯ ಹಾಗೂ ಸುತ್ತಲಿನ ಜಿಲ್ಲೆಯ ವಿದ್ಯಾರ್ಥಿಗಳ ಪ್ರವೇಶವನ್ನು ಪಡೆದುಕೊಳುತ್ತಾರೆ. ಹಾಗೆ ಎಲ್ಲ ಮಕ್ಕಳಿಗೆ ಜ್ಞಾನ ದೇಗುಲವಾಗಿ ಕೆಲಸ ನಿರ್ವಹಿಸುತ್ತಿದೆ.

ಕಳೆದ 2017–18ನೇ ಸಾಲಿನಿಂದ ಶಾಲೆ ಪ್ರಾರಂಭವಾಗಿದ್ದು, ಈ ಕಡಿಮೆ ಅವಧಿತಲ್ಲಿ ರಾಜ್ಯಮಟ್ಟಕ್ಕೆ ಕ್ರೀಡಾ ಸಾಧನೆಯನ್ನು ಮಾಡಿದೆ. ಅದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗಿಣ ಏಳಿಗೆ ಸರ್ವೋತೊಮುಖ ಅಭಿವೃದ್ದಿ ವದಗಿಸಲು ಪ್ರಾಮಾಣಿಕ ಪ್ರಯತ್ನದಲ್ಲಿ ನಿರತವಾಗಿದ್ದಾರೆ.

ಸೂರ್ಯೋದಯದ ಜೊತೆಗೆ ದಿನ ಆರಂಭವಾಗಿ ರಾತ್ರಿ 10.00 ಗಂಟೆಯ ತನಕ ನಿರಂತರವಾಗಿ ವಿದ್ಯಾರ್ಥಿಗಳ ಕಾರ್ಯ ಸಾಗಿರುತ್ತದೆ. ಬಳಿಕ ಯೋಗ/ವ್ಯಾಯಮ, ಅಭ್ಯಾಸ ಶಾಲಾ ಅವದಿ, ದೈಹಿಕ ಶಿಕ್ಷಕರು/ ವಾರ್ಡನ ಹಾಗು ಪ್ರಾಚಾರ್ಯರು ಎಲ್ಲ ಸಿಬ್ಬಂದಿ ವರ್ಗದವರು ಸೇರಿ ಕೆಲಸ ನಿರ್ವಹಿಸುತ್ತಾರೆ. ನಿಗದಿತ ತರಗತಿಗಳಲ್ಲದೆ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶಣದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ನೀಡಲಾಹಿದೆ. ಪ್ರತಿ ವಿಷಯಕ್ಕೆ ಸಂಭಂದಿಸಿದಂತೆ ವಿಷಯ ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮಾರ್ಗದರ್ಶನವನ್ನು ಪಡೆದುಕೊಳ್ಳುತಾರೆ. ಓದು, ಬರೆ, ಅಕ್ಷರ, ಸಾಮಾನ್ಯ ಜ್ಞಾನ,ಆರೋಗ್ಯ ಎಲ್ಲದರ ಬಗ್ಗೆ ಕಾಳಜಿ ವಹಿಸಲಾಗುತ್ತದೆ.

ನಿರಂರತ ಮೌಲ್ಯಮಾಪನದಿಂದ ಬರವಣಿಗೆ ಘಟಕ ಪರೀಕ್ಷೆ – ಈ.೦ –ಪರೀಕ್ಷೆ ಖಂ ಪರೀಕ್ಷೆಗಳ ಪ್ರತಿ ಹಂತದಿಂದ ವಿದ್ಯಾರ್ಥಿಗಳ ಅಭಿವ್ಯದಿಯನ್ನು ಗಮನಿಸಲಾಗುತ್ತದೆ. ವಸತಿ ಶಾಲೆಯ ಶಿಕ್ಷಕರ ಪರಿಣಾಮಕಾರಿ ಪಾಠ, ಸಮರ್ಪಣಾ ಭಾವ, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲಿಯ ವರೆಗೆ ಭಾಷಾ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಕಾನೂನು ಸಾಕ್ಷರತಾ ಸಂಘ, ಕ್ರೀಡಾ ಸಂಘ ಹಾಗು ಪ್ರತಿ ಶುಕ್ರವಾರ ಸಂಸ್ಕೃತಿ ಕಾರ್ಯಕ್ರಮ ಒಳಗೊಂಡಿರುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ಮಂಟೂರ(ಪ.ಜಾ), ತಾ: ರಾಯಬಾಗ ಜಿ: ಬೆಳಗಾವಿ

ಮಂಜೂರಾದ ವರ್ಷ	2014–2015
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–2018
ಕಟ್ಟಡದ ಸ್ವರೂಪ	ಉಚಿತ ಸರ್ಕಾರಿ ಕಟ್ಟಡ
ಅಕ್ಷಾಂಶ–ರೇಖಾಂಶ	16.2102,2–74.4910,9
ನಿವೇಶನದ ವಿಸ್ತೀರ್ಣತೆ	8 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	150

ವಿವರಣೆ

"ಪ್ರತಿಭೆಗೆ ಪುರಸ್ಕಾರ" ಎಂಬ ಧ್ಯೇಯ ವಾಕ್ಯದೊಂದಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ 2017–18 ರ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ವಸತಿ ಶಾಲೆಗಳಲ್ಲಿ ನಮ್ಮ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಟೂರ ಕೂಡ ಒಂದು. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ರಾಯಬಾಗ ಹೋಬಳಿಯ ಮಂಟೂರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ 2017–18 ನೇ ಸಾಲಿನಲ್ಲಿ ಹೊಸದಾಗಿ 50 ವಿದ್ಯಾರ್ಥಿಗಳೊಂದಿಗೆ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಪ್ರಾರಂಭವಾದ ನಮ್ಮ ಶಾಲೆಯು 6 ರಿಂದ 8 ನೇ ತರಗತಿಯ ಒಟ್ಟು 150 ವಿದ್ಯಾರ್ಥಿಗಳೊಂದಿಗೆ ರಾಷ್ಟ್ರಾಭಿಮಾನ,ಭಾವೈಕ್ಯತೆ,ಶಿಸ್ತು,ಪರಿಸರ ಜಾಗೃತಿ,ಸಹಾಯ,ನಾಯಕತ್ವ ಗುಣಗಳನ್ನು ಕಲಿಸುತ್ತಾ ನಡೆದಿದೆ. ಸೂರ್ಯೋದಯದೊಂದಿಗೆ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿಯು 'ಸದೃಢವಾದ ದೇಹದಲ್ಲಿ, ಸದೃಢವಾದ ಮನಸ್ಸು' ಎಂಬಂತೆ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಬೆಳಗಿನ ಪ್ರಾರ್ಥನೆ, ಯೋಗ, ವ್ಯಾಯಾಮದೊಂದಿಗೆ ಹಾಗೂ ಎಲ್ಲ ಶಿಕ್ಷಕರ ಮಾರ್ಗದರ್ಶನದಲ್ಲಿ ಪಾಠ ಬೋಧನೆಗಳೊಂದಿಗೆ ರಾತ್ರಿ 10.30 ರ ವರೆಗೆ ನಿರಂತರವಾಗಿ ಸಾಗುತ್ತದೆ.

ಪ್ರತಿ ಶುಕ್ರವಾರ ಸಾಯಂಕಾಲ ಮಕ್ಕಳ ಪ್ರತಿಭೆಯನ್ನು ಗುರುತಿಸಲು ಶಾರದಾ ಪೂಜೆಯೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳು (ಜಾನಪದ ನೃತ್ಯ, ನಾಟಕಗಳು, ಮಿಮಿಕ್ರಿ, ಹಾಸ್ಯ ಚಟಾಕಿಗಳು, ಚಿತ್ರಕಲೆ, ಭಾವಗೀತೆಗಳು, ಚಲನಚಿತ್ರ ಗೀತೆಗಳು, ಪೇಪರ ಕಟಿಂಗ್ ಕಲೆ, ಕಥೆ ಮುಂತಾದವುಗಳು) ನಡೆಯುತ್ತವೆ. ಅದೇ ರೀತಿ ಪ್ರತಿ ಶನಿವಾರ ಶಾಲಾ ಅವಧಿಯ ನಂತರ ರಸಪ್ರಶ್ನೆ ಕಾರ್ಯಕ್ರಮ ಜರಗುತ್ತದೆ. ಪ್ರತಿದಿನ ಶಾಲಾ ಅವಧಿಯ ನಂತರ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಕಲಿಕಾ ತರಗತಿಗಳು ಹಾಗೂ ಪರಿಹಾರ ಬೋಧನಾ ತರಗತಿಗಳು ನಡೆಯುತ್ತವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ

ಬಟಕುರ್ಕಿ ತಾ. ರಾಮದುರ್ಗ ಜಿ. ಬೆಳಗಾವಿ

ಮಂಜೂರಾದ ವರ್ಷ	2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.07–75.36
ನಿವೇಶನದ ವಿಸ್ತೀರ್ಣತೆ	10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಉತ್ತರ ಕರ್ನಾಟಕದ ಧರ್ಮಸ್ಥಳ ಎಂದು ಪ್ರಸಿದ್ಧಿ ಪಡೆದ ಪುಣ್ಯಕ್ಷೇತ್ರ, ಧಾರ್ಮಿಕ ಸುಕ್ಷೇತ್ರ ಶ್ರೀ ಗೊಡಚಿ ವೀರಭದ್ರೇಶ್ವರನ ಮಡಿಲಿನಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಶಾಲೆ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ ಬಟಕುರ್ಕಿ.

ಸೂರ್ಯೋದಯದೊಂದಿಗೆ ಆರಂಭವಾದ ವಿದ್ಯಾರ್ಥಿಗಳ ದಿನಚರಿ ರಾತ್ರಿ ಹತ್ತು ಗಂಟೆಯ ತನಕ ನಿರಂತರವಾಗಿ ಕಲಿಕೆ ಸಾಗುತ್ತದೆ. ಬೆಳಗಿನ ತಂಪಾದ ಪ್ರಕೃತಿಯ ಅಂಗಳದಲ್ಲಿ ದೈಹಿಕ ಶಿಕ್ಷಕರ ಮುಂದಾಳತ್ವದಲ್ಲಿ ಮಕ್ಕಳಿಗೆ ಸರಳ ವ್ಯಾಯಾಮಗಳು, ಯೋಗಾಸನ, ಪ್ರಾಣಾಯಾಮ ಇತ್ಯಾದಿ ಚಟುವಟಿಕೆ ನಡೆಸಿ ಮಕ್ಕಳಿಗೆ ಆಹ್ಲಾದಕರ ಚೈತನ್ಯವನ್ನು ತುಂಬುತ್ತಾರೆ.

ನಿಗದಿತ ತರಗತಿಗಳಲ್ಲದೆ ಮುಂಜಾನೆ ಮತ್ತು ಸಂಧ್ಯಾಕಾಲದಲ್ಲಿ ಶಿಕ್ಷಕರ ಮಾರ್ಗದರ್ಶನಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಭೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸಾಂಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಲಾಗುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ, ಅವರ ಅರ್ಪಣಾಭಾವ ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಕಾನೂನು ಸುರಕ್ಷತಾ ಸಂಘ, ಕ್ರಿಡಾ ಸಂಘಗಳ ಮೂಲಕ ವರ್ಷ ಪೂರ್ತಿ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಮಕ್ಕಳಲ್ಲಿ ನವಚೈತನ್ಯವನ್ನು ತುಂಬಲಾಗುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ

ತಪಸಿ, ಶಾಲಾ ಕೋಡ –594, ತಾ:ಗೋಕಾಕ (ಹಾಲಿ ವಸತಿ ಗೋಕಾಕ) ಜಿ:ಬೆಳಗಾವಿ

ಮಂಜೂರಾದ ವರ್ಷ	2016
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	16.07–75.36
ನಿವೇಶನದ ವಿಸ್ತೀರ್ಣತೆ	10 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕುಂದಾನಗರಿಯಾದ ಬೆಳಗಾವಿ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಿಗೆ, ಧಾರ್ಮಿಕ, ಸಾಹಿತಿಗಳ ನಾಡು ಹಾಗೂ ಕರದಂಟಿಗೆ ಹೆಸರುವಾಸಿಯಾಗಿರುವ ನಮ್ಮ ಹೆಮ್ಮೆಯ ನಾಡಾದ ಗೋಕಾಕನಿಂದ ಸುಮಾರು 13 ಕಿ. ಮೀ ದೂರದ ಪ್ರಕೃತಿಯ ಮಡಿಲಲ್ಲಿ ಹರಡಿಕೋಳ್ಳುವ ಶಾಲೆ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, (ಪ.ಜಾ–594) ತಪಸಿ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅರಭಾವಿ ಹೋಬಳಿಯ ತಪಸಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸುಮಾರು 10 ಎಕರೆ ಭೂಭಾಗವನ್ನು ಹೊಂದಿದ್ದು ಪ್ರತಿ ವರ್ಷ ರಾಜ್ಯದ ಬಹುತೇಕ ತಾಲೂಕುಗಳು ಹಾಗು ಜಿಲ್ಲೆಯ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ "ಒಂದೇ ಬಳ್ಳಿಯ ಹೂಗಳಂತೆ" ವಿದ್ಯಾರ್ಜನೆ ಮಾಡುತ್ತಿರವ (ಸರ್ವಜನಾಂಗದ ಶಾಂತಿಯ ತೋಟ) ನಮ್ಮ ಹೆಮ್ಮೆಯ ಶಾಲೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರಡಿಯಲ್ಲಿ ಸನ್ 2017–18 ನೇ ಸಾಲಿನಲ್ಲಿ ಸುಮಾರು 80 ಮಕ್ಕಳಿಂದ ಪ್ರಾರಂಭವಾದ ಶಾಲೆ, ಸನ್ 2019–20 ರಲ್ಲಿ ಸುಮಾರು 240 ವಿದ್ಯಾರ್ಥಿಗಳನ್ನು ಹೊಂದಿದೆ.ಪ್ರತಿ ದಿನ ಮುಂಜಾನೆ 6 ಗಂಟೆಯಿಂದ ವಿದ್ಯಾರ್ಥಿಗಳು ದಿನದ ವೇಳಾಪತ್ರಿಕೆಯಂತೆ ಬೆಳಗಿನ ವ್ಯಾಯಾಮದೊಂದಿಗೆ ಪ್ರಾರಂಭವಾಗಿ ನಿಗದಿತ ತರಗತಿಗಳಲ್ಲದೇ ಸುಂದರವಾದ ಪರಿಸರದಲ್ಲಿ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ವಿಶೇಷ ತರಗತಿಗಳು, ಗುಂಪು ಅಧ್ಯಯನ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಹಾರ ಬೋಧನೆ, ಯೋಗಾಸನ, ಪಠ್ಯ–ಪಠ್ಯೇತರ ಚಟುವಟಿಕೆಗಳನ್ನು ಮತ್ತು ನಿರಂತರ ಮೌಲ್ಯಮಾಪನದ ಮೂಲಕ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ಶಿಕ್ಷಕರ ಪರಿಣಾಮಕಾರಿ ಬೋಧನೆ, ಅವರ ಅರ್ಪಣಾ ಭಾವ, ಪಠ್ಯ ವಿಷಯಗಳ ಜೋತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಸಾಂಸ್ಕೃತಿಕ ಸಂಘ, ಕಾನೂನು ಸಾಕ್ಷರತಾ ಸಂಘ, ಕ್ರೀಡಾ ಸಂಘಗಳ ಮೂಲಕ ವರ್ಷ ಪೂರ್ತಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ಮಾನಸಿಕ, ದೈಹಿಕ ಹಾಗೂ ಸರ್ವಾಂಗೀಣ ಏಳ್ಗೆಗಾಗಿ ಶ್ರಮಿಸುತ್ತಿರುವ "ನಮ್ಮ ಶಾಲೆ ನಮ್ಮ ಹೆಮ್ಮೆ" ಆಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಅಟಲ ಬಿಹಾರಿ ವಾಜಪೇಯಿ ವಸತಿ ಶಾಲೆ

ಖಡಕಲಾಟ (606–ಬಿ.ಸಿ) ಮು.ಪೊ: ಖಡಕಲಾಟ (ನಿಪ್ಪಾಣಿ) ತಾ:ಚಿಕ್ಕೋಡಿ, ಜಿ: ಬೆಳಗಾವಿ ಪಿನ್:591228

ಮಂಜೂರಾದ ವರ್ಷ	2015
ಶೈಕ್ಷಣಿಕ ಕಾರ್ಯಾರಂಭ ವರ್ಷ	2016–17
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	8.20 ಎಕರೆ
ನಿವೇಶನದ ವಿಸ್ತೀರ್ಣತೆ	288
ಪ್ರವೇಶ ಮಂಜೂರಾತಿ ಸಂಖ್ಯೆ	

ವಿವರಣೆ

ಕರ್ನಾಟಕ ರಾಜ್ಯದ ಎರಡನೇ ರಾಜಧಾನಿಯಾದ ಕುಂದಾನಗರಿ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶ ನಿಪ್ಪಾಣಿಯಲ್ಲಿ ನೆಲೆಗೊಂಡಿರುವ ಅಟಲ ಬಿಹಾರಿ ವಾಜಪೇಯಿ ವಸತಿ ಶಾಲೆಯು ನಿಪ್ಪಾಣಿಯ ಬಸ್ಸ್ ನಿಲ್ದಾಣದಿಂದ ಸುಮಾರು 3 ಕಿ.ಮೀ. ದೂರದ ಹೊರವಲಯದಲ್ಲಿರುವ ಐತಿಹಾಸಿಕ ಪುಣ್ಯ ಕ್ಷೇತ್ರ ಶ್ರೀ ಹಾಲಸಿದ್ದನಾಥ ಮಂದಿರದ ಎದುರಗಡೆ ಸ್ವಚ್ಚಂದವಾಗಿ ಪ್ರಕೃತಿಯ ಮಡಿಲಿನಲ್ಲಿ ಬಾಡಿಗೆ ಕಟ್ಟಡದಲ್ಲಿ ನಡಿಯುತ್ತಿದೆ.

ಈ ಶಾಲೆಯು ದಿನಾಂಕ 01 ಜೂನ್ 2016ರಂದು ಪ್ರಾರಂಭಗೊಂಡಿದ್ದು ಇಲ್ಲಿಯವರೆಗೆ ನಾಲ್ಕು ವಸಂತಗಳನ್ನು ಕಂಡಿದೆ ಪ್ರತಿ ವರ್ಷವು ಜಿಲ್ಲೆಯ ಬಹುತೇಕ ತಾಲ್ಲೂಕಗಳಿಂದ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ಒಂದಾಗಿ, ಚೆಂದಾಗಿ ವಿದ್ಯಾರ್ಜನೆ ಮಾಡುತ್ತಿರುವ ಸರ್ವಜನಾಂಗದ ಶಾಂತಿಯ ತೋಟವಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

ಶೈಕ್ಷಣಿಕ ಪ್ರಗತಿ :

ಸುಮಾರು 288 ವಿದ್ಯಾರ್ಥಿಗಳು ವಿದ್ಯಾರ್ಜಣೆಗೈಯುತ್ತಿದ್ದು ಸೂರ್ಯೋದಯದೊಂದಿಗೆ ಆರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10:00 ಗಂಟೆಯ ತನಕ ನಿರಂತರವಾಗಿ ಸಾಗುತ್ತದೆ, ನಿಗದಿತ ತರಗತಿಗಳಲ್ಲದೆ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿದೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಭೋಧನೆ ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸರಾಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತಿಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಿ ಗುಣಮಟ್ಟದ ಶಿಕ್ಷಣದ ಮೂಲಕ ಎಸ್.ಎಸ್.ಎಲ್.ಸಿ ಪರೀಕ್ಷೆಯ ಶೇ.100 ರಷ್ಟು ಫಲಿತಾಂಶದತ್ತ ಅತ್ಯಂತ ಹುರುಪಿನಿಂದ ದಾಪುಗಾಲು ಇಡುವುದರ ಜೊತೆಗೆ ರಾಜ್ಯದ ವಸತಿ ಶಾಲೆಗಳಲ್ಲಿಯೆ ಹೆಸರುವಾಸಿಯಾಗ ತೊಡಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ

ಹಂಚಿನಾಳ ತಾ॥ ಚಿಕ್ಕೋಡಿ ಜಿ॥ ಬೆಳಗಾವಿ, ಹೋಬಳಿ : ಸೌಂದಲಗಾ

ಮಂಜೂರಾದ ವರ್ಷ	2015
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	7.65 ಏಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	288

ವಿವರಣೆ

ಮಹಾರಾಷ್ಟ್ರ ಗಡಿಭಾಗದಲ್ಲಿ ಬರುವ ನಿಪ್ಪಾಣಿ ನಗರದ ಸುಪ್ರಿಸಿದ್ದ ಧಾರ್ಮಿಕ ಕ್ಷೇತ್ರವಾಗಿರುವ ಶ್ರೀ ದತ್ತಾತ್ರೇಯ ಹಾಗೂ ಶ್ರೀ ಮಲ್ಲಿಕಾರ್ಜೂನ ಮಂದಿರ ಗ್ರಾಮ ಆಡಿ. ಇಂತಹ ಸುಪ್ರಸಿದ್ಧವಾದ ಶಾಂತವಾದ ರಮಣೀಯ ಸ್ಥಳ ಆಡಿ ಗ್ರಾಮದಿಂದ ಕೇವಲ 3 ಕಿ. ಮೀ ಅಂತರದಲ್ಲಿರವ ನಮ್ಮ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಂಚಿನಾಳ[ಕೆ.ಎಸ್]–686[ಪ.ವರ್ಗ].

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಸಾ॥ ಹಂಚಿನಾಳ[ಕೆ.ಎಸ್] ಗ್ರಾಮವು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸೌಂದಲಗಾ ಹೋಬಳಿಯ ಆಡಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಸುಮಾರು 7.65 ಏಕರೆ ಭೂಭಾಗವನ್ನು ಹೊಂದಿರುವ ಈ ಶಾಲೆಯು ಪ್ರತಿ ವರ್ಷ ಪ್ರತಿಭಾವಂತ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ವಿದ್ಯಾತಾಣ ಎಂದು ಪ್ರಸಿದ್ಧಿ ಪಡೆಯುವ ಪ್ರಗತಿಯಲ್ಲಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ಈ ಶಾಲೆಯು ಒಟ್ಟು 14 ಜನ ಸಿಬ್ಬಂದಿಗಳಲ್ಲಿ 7 ಜನ ಬೋಧಕರು ಹಾಗೂ 7 ಜನ ಬೋಧಕೇತರ ಸಿಬ್ಬಂದಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಶಾಲೆಯ ಪ್ರಾಂಶುಪಾಲರು , ನಿಲಯಪಾಲಕರು ಹಾಗೂ ಬೋಧಕ ಸಿಬ್ಬಂದಿಯು ಮಕ್ಕಳ ಸರ್ವಾಂಗೀಣ ಬೆಳವಣಿಗೆಯೇ ಪ್ರಥಮ ಗುರಿ ಎಂದು ಅರಿತು ಕಾರ್ಯನಿರ್ವಹಿಸುತ್ತಾರೆ. ಪ್ರತಿಯೊಬ್ಬ ಬಾಲಕಿಯು ತನ್ನ ಪಠ್ಯ ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ಹಾಗೂ ಸ್ವಪ್ರತಿಭೆಗೆ ಮಾರ್ಗದರ್ಶನ ನೀಡಲು ಈ ಶಾಲೆಯು ಬೆಳಿಗ್ಗೆ 5.30 ರಿಂದ ರಾತ್ರಿ 10.00 ವರೆಗೆ ವಿವಿಧ ಪರಿಹಾರ ಬೋಧನೆ ಹಾಕಿಕೊಂಡಿದೆ. ಮಕ್ಕಳ ಮಾನಸಿಕ, ಶಾರೀರಿಕ, ವ್ಯಾಸಂಗಿಕವಾಗಿ ಧೃಢರಾಗುವಂತೆ ಮಾಡಲು ಯೋಗ, ವ್ಯಾಯಾಮ, ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ ಯೋಜನೆ, ವಿದ್ಯಾರ್ಥಿ ಗುಂಪು ಚರ್ಚೆ ಅಧ್ಯಯನ, ಹೀಗೆ ಹಲವಾರು ಕಾರ್ಯಯೋಜನೆ ಹಾಕಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಇದೇ ತಿಂಗಳು 14–12–2019 ರಂದು ಮೊರಾರ್ಜಿ ವಸತಿ ಶಾಲೆ ನಿಡಸೋಸಿಯಲ್ಲಿ ಜರುಗಿದ ಜಿಲ್ಲಾ ಮಟ್ಟದ "ಕೈ ಬರಹ ಸ್ಪರ್ಧೆ" ಯಲ್ಲಿ ಭಾಗವಹಿಸಿ ಹಿಂದಿ ಹಾಗೂ ಕನ್ನಡ ಭಾಷೆಯಲ್ಲಿ ಸಮಾಧಾನಕಾರಕ ಬಹುಮಾನ ಪಡೆದುಕೊಂಡಿರುತ್ತಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ

ಕಪ್ಪಲಗುದ್ದಿ ಎಸ್.ಸಿ #687, ಹೋಬಳಿ: ಕುಡಚಿ ತಾ॥ ರಾಯಬಾಗ ಜಿ॥ ಬೆಳಗಾವಿ

ಮಂಜೂರಾದ ವರ್ಷ	2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	10 ಏಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	150

ವಿವರಣೆ

- 2017–18 ನೇ ಸಾಲಿನಲ್ಲಿ ಪ್ರಾರಂಭವಾದ ವಸತಿ ಶಾಲೆಯು ಕೇವಲ ಪ್ರವೇಶ ಪರೀಕ್ಷೆಗಳ ಮುಖಾಂತರ 50 ವಿದ್ಯಾರ್ಥಿಗಳು ಆಯ್ಕೆಯಾಗಿ ಪ್ರಾರಂಭಗೊಂಡು ಇಂದು 6 ನೇ, 7ನೇ, 8ನೇ ತರಗತಿಯಲ್ಲಿ ಒಟ್ಟು 165 ವಿದ್ಯಾರ್ಥಿನೀಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.
- ವಸತಿ ಶಾಲೆಯಿಂದ ಹ್ಯಾಂಡಬಾಲ್ ಸ್ಪರ್ಧೆಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿನಿಯರು ರಾಜ್ಯ ಮಟ್ಟಕ್ಕೆ 7 ಜನ ವಿದ್ಯಾರ್ಥಿಗಳು ಹಾಗೂ ರಾಷ್ಟ್ರ ಮಟ್ಟದಲ್ಲಿ 2 ಜನ ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ.
- ಮಕ್ಕಳಿಗೆ ಪ್ರತಿದಿನ ಬೆಳಿಗ್ಗೆ 5:00 ಗಂಟೆಯಿಂದ ರಾತ್ರಿ 10:30 ರವರೆಗೆ ನಿರಂತರ ಶೈಕ್ಷಣಿಕ ಚಟುವಟಿಕೆಗಳು,ತರಗತಿಗಳು,ಪಠ್ಯೆತರ ಚಟುವಟಿಗಳು, ಪರಿಹಾರ ಬೋಧನೆಗಳು ,ವಿಶೇಷ ತರಗತಿಗಳು ದಿನನಿತ್ಯ ನಿರಂತರವಾಗಿ ನಡೆಯುವಂತೆ ಮಕ್ಕಳ ಕುರಿತು ವಿಶೇಷ ಕಾಳಜಿ ವಹಿಸಲಾಗುವುದು.
- ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇವರ ಅಧೀನದಲ್ಲಿ ಪ್ರತಿ ವರ್ಷವು ರಾಜ್ಯದ ಬಹುತೇಕ ಜಿಲ್ಲೆಗಳ,ತಾಲೂಕಗಳ,ಹಳ್ಳಿಗಳಿಂದ ವಿವಿಧ ಜಾತಿ,ಮತ,ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರು ಒಂದಾಗಿ ಹೋಂದಿಕೊಂಡು ಒಂದೇ ಕುಟುಂಬವಿರುವಂತೆ ಕೂಡಿಕೋಂಡು ಚೆನ್ನಾಗಿ ವಿದ್ಯಾರ್ಜನೆ ಮಾಡುತ್ತೀರುವ ನಿಜವಾಗಿಯು " ಸರ್ವಜನಾಂಗದ ಶಾಂತಿಯತೋಟ" ದಂತೆ ಆಗಿರುತ್ತದೆ, ಕಡುಬಡವರ ಮಕ್ಕಳಿಗೆ, ವಿಧವಾ ,ರೈತ ಆತ್ಮಹತ್ಯೆ ಮಕ್ಕಳಿಗೆ, ಪರಿಶಿಷ್ಠ ಜಾತಿ,ಪರಿಶಿಷ್ಠ ಪಂಗಡ,ಹಾಗೂ ಹಿಂದೂಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಈ ಶಾಲೆಗಳು ಬಹಳ ಅನೂಕೂಲವಾಗಿರುತ್ತವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ

ಮುನವಳ್ಳಿ (ಎಸ್.ಟಿ–689) ತಾ॥ ಸವದತ್ತಿ, ಜಿ॥ ಬೆಳಗಾವಿ.

ಮಂಜೂರಾದ ವರ್ಷ	2016
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	(ಟ್ಯಾಗ್) ಮೊರಾರ್ಜಿ ದೇಸಾಯಿ ವಸತಿ ಶಾಲೆ,
ಅಕ್ಷಾಂಶ–ರೇಖಾಂಶ	_____
ನಿವೇಶನದ ವಿಸ್ತೀರ್ಣತೆ	_____
ಪ್ರವೇಶ ಮಂಜೂರಾತಿ ಸಂಖ್ಯೆ	_____

ವಿವರಣೆ

ಇದೇ ಸ್ಥಳದಲ್ಲಿ ಅಂದರೆ ಸವದತ್ತಿ ಹಾಗೂ ಯಲ್ಲಮ್ಮನಗುಡ್ಡ ಮಧ್ಯ ಭಾಗದಲಿ ವಿಸ್ತಾರವಾಗಿ ಹಬ್ಬಿರುವ ಶಾಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ,ಯಲ್ಲಮ್ಮನಗುಡ್ಡ ತಾ॥ ಸವದತ್ತಿ ಜಿ॥ ಬೆಳಗಾವಿ ಇಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ,ಮುನವಳ್ಳಿ(ಕಿಟದಾಳ) ತಾ॥ ಸವದತ್ತಿ ಇಲ್ಲಿ ಸೆಪ್ಟಂಬರ–2018ರಿಂದ ನಮ್ಮ ವಸತಿ ಶಾಲೆಯಲ್ಲಿ ಜೋಡನೆ ಮಾಡಿ ಮಾನ್ಯ ಜಂಟಿ ನಿರ್ದೇಶಕರ ಆದೇಶದ ಮೇರೆಗೆ ನಡೆಯುತ್ತಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ ಹೋಬಳಿಯ ಪುರಸಭೆ ವ್ಯಾಪ್ತಿಯಲ್ಲಿ ಬರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಮುನವಳ್ಳಿ (ಕಿಟದಾಳ) ತಾ॥ ಸವದತ್ತಿ ಜಿ॥ ಬೆಳಗಾವಿ ಸ್ವಂತ ಕಟ್ಟಡ ಹೊಂದಿರುವುದಿಲ್ಲ ಆದ್ದರಿಂದ ತಾತ್ಕಾಲಿಕವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಲ್ಲಮ್ಮನಗುಡ್ಡ. ಇಲ್ಲಿ ಪ್ರತಿವರ್ಷವೂ ಬೆಳಗಾವಿ ಜಿಲ್ಲೆಯ ತಾಲೂಕುಗಳಿಂದ ಹಾಗೂ ಬೇರೆ ಜಿಲ್ಲೆಯ ತಾಲೂಕುಗಳಿಂದಲೂ ವಿವಿಧ ಜಾತಿ, ಮತ,ಧರ್ಮಗಳಿಗೆ ಸೇರಿದ ಮಕ್ಕಳೆಲ್ಲರೂ ನಮ್ಮ ವಸತಿ ಶಾಲೆಗೆ ದಾಖಲಾತಿ ಪಡೆದು ನಾವೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಮನೋಭಾವನೆಯಿಂದ ವ್ಯಾಸಂಗ ಮಾಡುತ್ತಿದ್ದಾರೆ.

ನಿಗದಿತ ತರಗತಿಗಳಲ್ಲದೆ ಬೆಳಿಗ್ಗೆ ಮತ್ತು ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸುಗಮವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ.ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಮೂಲಕ ಪ್ರತಿ ವಿಭಾಗದಲ್ಲಿಯೂ ವಿದ್ಯಾರ್ಥಿಗಳ ಸಾಧನೆಯನ್ನು ಗಮನಿಸಲಾಗುತ್ತದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ

ಜಾಂಬೋಟಿ ತಾ// ಖಾನಾಪೂರ ಜಿ// ಬೆಳಗಾವಿ.

ಮಂಜೂರಾದ ವರ್ಷ	2017–18
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	4 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	150

ವಿವರಣೆ

ವೀರ ಧೀರ ಸ್ವಾತಂತ್ರ್ಯ ಹೋರಾಟಗಾರ ಸಂಗೋಳ್ಳಿ ರಾಯಣ್ಣ ಹಾಗೂ ವೀರರಾಣಿ ಕಿತ್ತೂರು ರಾಣಿ ಚನ್ನಮ್ಮ ಮೆಟ್ಟಿದ ನಾಡಿನಲ್ಲಿ ಹಾಗೂ ಪ್ರಾಕೃತಿಕ ನಿಸರ್ಗದ ಮಡಿಲಲ್ಲಿ ತೆಲೆಯೆತ್ತಿ ನಿಂತಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಜಾಂಬೋಟಿ ತಾ// ಖಾನಾಪೂರ ಜಿ// ಬೆಳಗಾವಿ. ಸನ್ 2017–18 ನೇ ಸಾಲಿನಿಂದ ಪ್ರಾರಂಭವಾಗಿದೆ.

2019–20 ನೇ ಸಾಲಿನಲ್ಲಿ ನಡೆದ ಜಿಲ್ಲಾ ಮಟ್ಟದ ಜನಪದ ನೃತ್ಯದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ, ಸಮಾಧಾನಕರ ಬಹುಮಾನವನ್ನು ಪಡೆದಿರುತ್ತಾರೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ. ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ

ತೆಲಸಂಗ, ತಾ–ಅಥಣಿ, ಜಿ–ಬೆಳಗಾವಿ

ಮಂಜೂರಾದ ವರ್ಷ	2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	16.791778–75.337861
ನಿವೇಶನದ ವಿಸ್ತೀರ್ಣತೆ	–
ಪ್ರವೇಶ ಮಂಜೂರಾತಿ ಸಂಖ್ಯೆ	200

ವಿವರಣೆ

ನಮ್ಮ ವಸತಿ ಶಾಲೆಯು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಿಂದ ಸುಮಾರು 35 ಕಿ.ಮೀ ದೂರದಲ್ಲಿ ಇದೆ. ಪ್ರಶಾಂತವಾದ ವಾತಾವರಣದಲ್ಲಿ ಸರಕಾರಿ ಹಿರಿಯ ಶಾಸಕರ ಮಾದರಿ ಕನ್ನಡ ಶಾಲೆ ತೆಲಸಂಗದಲ್ಲಿ ಹಳೆಯ 8 ಕೋಣೆಗಳಲ್ಲಿ ಶಾಲೆ ನಡೆಯುತ್ತಿದೆ. ನುರಿತ ಶಿಕ್ಷಕ ವೃಂದದಿಂದ ಕೂಡಿದ ನಮ್ಮ ಶಾಲೆ ಪಾಠದಲ್ಲಿ ಹಾಗೂ ಆಟದಲ್ಲಿ ಯಾವತ್ತು ಮುಂದಿದೆ. ಪವಿತ್ರ ಪುಣ್ಯಕ್ಷೇತ್ರವಾದ ಈ ಊರು ಆದಿಶಕ್ತಿ ಯಲ್ಲಮ್ಮ ದೇವಿಯ ದೇವಸ್ಥಾನ ಸುಮಾರು ಶಾಲೆಯಿಂದ 2 ಕಿ.ಮೀ ದೂರದಲ್ಲಿದೆ. ಶಾಲೆಯ ನಿವೇಶನವು ತೆಲಸಂಗದಿಂದ 1.5 ಕಿ.ಮೀ ದೂರದಲ್ಲಿ ಐಗಳಿ ಮುಖ್ಯ ರಸ್ತೆ ಹೊಂದಿಕೊಂಡಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ॥ ಬಿ ಆರ್ ಅಂಬೇಡ್ಕರ ಬಾಲಕಿಯರ ವಸತಿ ಶಾಲೆ

ಅರಭಾಂವಿ. (ಪ.ಜಾ), ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮಂಜೂರಾದ ವರ್ಷ	2016–2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಉಚಿತ
ಅಕ್ಷಾಂಶ–ರೇಖಾಂಶ	–
ನಿವೇಶನದ ವಿಸ್ತೀರ್ಣತೆ	–
ಪ್ರವೇಶ ಮಂಜೂರಾತಿ ಸಂಖ್ಯೆ	–

ವಿವರಣೆ

ಕರ್ನಾಟಕದ ನಯಾಗರ ಎಂದು ಪ್ರಖ್ಯಾತಿ ಪಡೆದಿರುವ ಗೋಕಾಕ ಪಾಲ್ಸ ದಿಂದ ಸುಮಾರು 12 ಕಿ. ಮೀ ದೂರದಲ್ಲಿನ ಅರಭಾಂವಿಯ ಶ್ರೀ ದುರದುಂಡಿಶ್ವರ ಸಿದ್ದಸಂಸ್ಥಾನ ಮಠ ಅರಭಾಂವಿಯ ಧಾರ್ಮಿಕ ನೆಲೆಯ ಸನಿಹದಲ್ಲಿರುವ ಅರಭಾಂವಿ ಪಟ್ಟಣದ ಮೇಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ಮೇಲ್ಮಹಡಿಯಲ್ಲಿ, ಡಾ॥ ಬಿ.ಆರ್.ಅಂಬೇಡ್ಕರ ಬಾಲಕಿಯರ ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅರಭಾಂವಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ 2017–18 ನೇ ಸಾಲಿನಲ್ಲಿ ಹೊಸದಾಗಿ 50 ವಿದ್ಯಾರ್ಥಿಗಳೊಂದಿಗೆ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಗಂಡು ಮತ್ತು ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ಪ್ರಾರಂಭವಾದ ನಮ್ಮ ಶಾಲೆಯು ಈಗ 6 ರಿಂದ 8 ನೇ ತರಗತಿಯ ವರೆಗೆ ಒಟ್ಟು 150 ವಿದ್ಯಾರ್ಥಿನಿಯರೊಂದಿಗೆ ರಾಷ್ಟ್ರಾಭಿಮಾನ, ಭಾವೈಕ್ಯತೆ, ಶಿಸ್ತು, ಪರಿಸರ ಜಾಗೃತಿ, ಸ್ವ ಸಹಾಯ, ನಾಯಕತ್ವ ಗುಣಗಳನ್ನು ಕಲಿಸುತ್ತಾ ನಡೆದಿದೆ. ಸೂರ್ಯೋದಯದೊಂದಿಗೆ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿಯು ' ಆರೋಗ್ಯವೇ ಭಾಗ್ಯ' ಎಂಬಂತೆ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಬೆಳಗಿನ ಪ್ರಾರ್ಥನೆ, ಯೋಗ, ವ್ಯಾಯಾಮದೊಂದಿಗೆ, ಹಾಗೂ ಎಲ್ಲ ಶಿಕ್ಷಕರ ಮಾರ್ಗದರ್ಶನದಲ್ಲಿ ಪಾಠ ಬೋಧನೆಗಳೊಂದಿಗೆ ರಾತ್ರಿ 10.00 ರವರೆಗೆ ನಿರಂತರವಾಗಿ ಸಾಗುತ್ತದೆ.

ಪ್ರತಿ ಸೋಮವಾರ ಸಾಯಂಕಾಲ ಮಕ್ಕಳ ಪ್ರತಿಭೆಯನ್ನು ಗುರುತಿಸಲು ಸಾಂಸ್ಕೃತಿಕ ಚಟುವಟಿಕೆಗಳನ್ನು (ಜಾನಪದ ನೃತ್ಯ, ನಾಟಕಗಳು, ಮಿಮಿಕ್ರಿ, ಹಾಸ್ಯ ಚಟಾಕಿಗಳು, ಭಾವಗೀತೆಗಳು, ಚಲನಚಿತ್ರ ಗೀತೆಗಳು, ಪೇಪರ ಕಟಿಂಗ್ ಕಲೆ, ಕಥೆ ಮುಂತಾದವುಗಳು) ನಡೆಸಲಾಗುತ್ತದೆ. ಅದೇ ರೀತಿ ಪ್ರತಿ ಬುಧವಾರ ಶಾಲಾ ಅವಧಿಯ ನಂತರ ರಸಪ್ರಶ್ನೆ(ಎಲ್ಲ ವಿಷಯಗಳು) ಕಾರ್ಯಕ್ರಮ ನಡೆಸುತ್ತೇವೆ. ಪ್ರತಿ ಶುಕ್ರವಾರ ಶಾರದ ಪೂಜಾ ಕಾರ್ಯಕ್ರಮವನ್ನು ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆಸಲಾಗುತ್ತದೆ. ಪ್ರತಿದಿನ ಶಾಲಾ ಅವಧಿಯ ನಂತರ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಕಲಿಕಾ ತರಗತಿಗಳು ಹಾಗೂ ಪರಿಹಾರ ಭೋಧನಾ ತರಗತಿಗಳು ನಡೆಯುತ್ತವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ॥ ಬಿ. ಆರ್. ಅಂಬೇಡ್ಕರ್ ವಸತಿ ಶಾಲೆ

ಗೊಡಚಿನಮಲ್ಕಿ, ತಾ: ಗೋಕಾಕ ಜಿ: ಬೆಳಗಾವಿ – 591307

ಮಂಜೂರಾದ ವರ್ಷ	2017–2018
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–2018
ಕಟ್ಟಡದ ಸ್ವರೂಪ	ಬಾಡಿಗೆ
ಅಕ್ಷಾಂಶ–ರೇಖಾಂಶ	16.09–74.49
ನಿವೇಶನದ ವಿಸ್ತೀರ್ಣತೆ	–
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಕರ್ನಾಟಕ ರಾಜ್ಯದ ಪ್ರವಾಸಿ ತಾಣಗಳಲ್ಲಿ ಒಂದಾದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅತ್ಯಂತ ಸುಂದರಮಯವಾದ ಪ್ರೇಕ್ಷಣೀಯ ಎರಡು ಜಲಪಾತಗಳಲ್ಲಿ ಗೋಕಾಕ ಜಲಪಾತ ಮತ್ತು ಗೊಡಚಿನಮಲ್ಕಿ ಜಲಪಾತಗಳಾಗಿವೆ. ಈ ಜಲಪಾತಗಳಿಗೆ ಹೊಂದಿಕೊಂಡಂತೆ ಕುಂದರಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗೊಡಚಿನಮಲ್ಕಿ ಗ್ರಾಮದ ಸುಮಾರು 10 ಎಕರೆ ಪ್ರದೇಶವನ್ನು ಹೊಂದಿರುವ ಡಾ॥ ಬಿ. ಆರ್. ಅಂಬೇಡ್ಕರ್ ವಸತಿ ಶಾಲೆ ಗೊಡಚಿನಮಲ್ಕಿ ಕಟ್ಟಡ ನಿರ್ಮಾಣ ಪ್ರಾರಂಭವಾಗುವ ಹಂತದಲ್ಲಿರುವದು.

ಬೆಳಗಿನ ಜಾವ 5 ಗಂಟೆಗೆ ದೈಹಿಕ ಶಿಕ್ಷಕರ ಮಾರ್ಗದರ್ಶನದಲ್ಲಿ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10 ಗಂಟೆಯ ತನಕ ನಿರಂತರವಾಗಿ ಸಾಗುತ್ತದೆ. ಬೆಳಗಿನ ಜಾವ ಸರಳ ಕಲಿಕೆಯ ಯೋಗಾಸನ, ಪ್ರಾಣಾಯಾಮ ವ್ಯಾಯಾಮಗಳಿಂದ ವಿದ್ಯಾರ್ಥಿಗಳ ಮನಸ್ಸು ಉಲ್ಲಸಿತಗೊಂಡು ಕಲಿಕೆಯಲ್ಲಿ ಆಸಕ್ತರಾಗುವರು. ನಿಗದಿತ ತರಗತಿಗಳಲ್ಲದೆ. ಬೆಳಿಗ್ಗೆ ಹಾಗೂ ಸಾಯಂಕಾಲ ವಿಷಯ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ವಿಶೇಷ ತರಗತಿಗಳು ಹಾಗೂ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಕಾಳಜಿ ವಹಿಸಲಾಗಿತ್ತಿದೆ.

ಶಾಲೆಯ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಸದಾಕಾಲ ಚಿಂತನೆ ಮಾಡುತ್ತ ಅವರ ಕುಂದುಕೊರತೆಗಳನ್ನು ಆಲಿಸಿ ತಕ್ಷಣ ಸ್ಪಂದಿಸುವ ಪ್ರಾಂಶುಪಾಲರಾದ ಶ್ರೀ. ಆರ್. ಎನ್. ಬೆನಚಮರಡಿ ಗುರುಗಳು ಹಾಗೂ ನಿಲಯಪಾಲಕರಾದ ಶ್ರೀ. ಎಸ್. ವಿ. ತಳವಾರ ಇವರ ಕಾರ್ಯವೈಖರಿ ಮೆಚ್ಚುವಂತಹುದು.

ಶಿಕ್ಷಕರ ಪರಿಣಾಮಕಾರಿ ಬೋಧನೆ ಅವರ ಅರ್ಪಣಾ ಮನೋಭಾವ , ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳನ್ನೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ ಶ್ರೀಮತಿ. ಆರ್. ಎಸ್. ಖಣದಾಳೆ ಮತ್ತು ಶ್ರೀಮತಿ ಎಸ್. ವಿ. ಸೊಪ್ಪಡ್ಲ ಗುರುಮಾತೆಯರು ಪರಿಸರ ಸಂಘ ಮತ್ತು ವಿಜ್ಞಾನ ಸಂಘ ಶ್ರೀ. ವ್ಹಿ. ಎ. ಗುಡೆನ್ನವರ ಗುರುಗಳು ಮತ್ತು ಶ್ರೀಮತಿ ಎಮ್. ಎಮ್. ಅಂಗಡಿ ಹಾಗೂ ಆರೋಗ್ಯ ಸಂಘ ಮತ್ತು ಕ್ರೀಡಾ ಸಂಘ ಶ್ರೀ ಸಿ. ಎನ್. ಗಲಗಲಿ ಗುರುಗಳು ವಿವಿಧ ಸಂಘಗಳ ನೆತೃತ್ವ ವಹಿಸಿ ವರ್ಷ ಪೂರ್ತಿ ವಿವಿಧ ಸ್ಪರ್ಧೆ ಮನರಂಜನೆ ಕಾರ್ಯಕ್ರಮ ಪ್ರಯೋಗ ಪರಿಸರ ಜಾಗೃತಿ ಆರೋಗ್ಯಕಾರಿ ಬೆಳವಣಿಗೆಗಳ ಕುರಿತು ಮಾರ್ಗದರ್ಶನ ಮಾಡುತ್ತಿದ್ದಾರೆ

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ.ಬಿ.ಆರ್.ಅಂಬೇಡ್ಕರ ಬಾಲಕಿಯರ ವಸತಿ ಶಾಲೆ

ಶಿರಗಾಂವ–787 ತಾ॥ ಚಿಕ್ಕೋಡಿ ಜಿ॥ ಬೆಳಗಾವಿ

ಮಂಜೂರಾದ ವರ್ಷ	2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಉಚಿತ ಸರ್ಕಾರಿ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	8 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	

ವಿವರಣೆ

ಪವಿತ್ರ ಬಸವೇಶ್ವರ ನೆಲೆಸಿದ ಪುಣ್ಯಕ್ಷೇತ್ರ ಜುಳು ಜುಳು ನಾದಗೈಯುತ್ತ ಧರಣಿತಳಕ್ಕೆ ಅಮೃತವನ್ನು ಉಣಬಡಿಸುತ್ತ ಹರಿಯುತ್ತಿರುವ ಕೃಷ್ಣಾನದಿಯ ಸಮೀಪಕ್ಕೆ ಇರುವ ಚಿಕ್ಕೋಡಿ ಇಚಲಕರಂಜಿಯ ಪ್ರಮುಖ ರಸ್ತೆ. ಚಿಕ್ಕೋಡಿಯಿಂದ 11 ಕೀ.ಮೀ ದೂರದಲ್ಲಿನ ಪ್ರಕೃತಿಯ ಸುಂದರವಾದ ಮಡಿಲಲ್ಲಿರುವ ಶಾಲೆ ಡಾ.ಬಿ.ಆರ್. ಅಂಬೇಡ್ಕರ ವಸತಿ ಶಾಲೆ ಶಿರಗಾಂವ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಸಂಘ ಬೆಂಗಳೂರು ಇವರ ಆಶ್ರಯದಲ್ಲಿ ನಡೆಯುತ್ತಿರುವ 819 ವಸತಿ ಶಾಲಾ/ಕಾಲೆಜುಗಳಲ್ಲಿ 787 ಶಾಲಾ ಕೋಡ ಹೊಂದಿರುವಂತಹ ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಲಯಗಳ ಹಾಗೂ ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ನಿರ್ವಹಣಾ ಕೈಪಿಡಿ 2014 ರಂತೆ ಮುಂಜಾನೆ 5.00 ಗಂಟೆಗೆ ದಿನಚರಿ ಪ್ರಾರಂಭವಾಗಿ ರಾತ್ರಿ 10 ಗಂಟೆವರೆಗೆ ನಿರಂತರವಾಗಿ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಯಾವುದೇ ತೊಂದರೆಯಿಲ್ಲದೆ ನಡೆಯುತ್ತಿದೆ. ದೈಹಿಕ ಶಿಕ್ಷಕರ ಮಾರ್ಗದರ್ಶನದೊಂದಿಗೆ ಕೆಲವು ಸರಳ ವ್ಯಾಯಾಮ, ಯೋಗಾಸನ, ಪ್ರಾಣಾಯಾಮಗಳನ್ನೊಳಗೊಂಡು ದೈಹಿಕವಾಗಿ ಸದೃಡವಾಗಿ ವಿದ್ಯಾರ್ಥಿನಿಯರ ಬೆಳವಣಿಗೆಗೆ ಚೈತನ್ಯ ತುಂಬುವ ಚಟುವಟುಕೆಗಳು ಪ್ರತಿನಿತ್ಯ ನಡೆಯುತ್ತೀವೆ. ಉತ್ತಮ ಭೋದಕ ಸಿಬ್ಬಂದಿಗಳ ಮಾರ್ಗದರ್ಶನದಲ್ಲಿ ಎಲ್ಲಾ ವಿಷಯದ ಅವಧಿಗಳ ನಿಗದಿತ ನಿಯಮದಲ್ಲಿ ನಡೆಯುತ್ತಾ ಬೆಳಿಗ್ಗೆ ಸಾಯಂಕಾಲ ಶಿಕ್ಷಕರ ಸ್ವಯಂ ಮಾರ್ಗದರ್ಶನ ಹಾಗೂ ಎಮ್.ಓ.ಡಿ ಮೂಲಕ ಕಲಿಕೆಯಲ್ಲಿ ಹಿಂದುಳಿದ ವಿದ್ಯಾಥಿಗಳಿಗೆ ಪರಿಹಾರ ಭೋದನೆ ಕೈ ಬರಹಕ್ಕೆ ಹೆಚ್ಚಿನ ಒತ್ತು ನೀಡುತ್ತ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸರಾಗವಾಗಿ ನಡೆಯುತ್ತಿದೆ ಹಾಗೂ ನಿರಂತರ ಮೌಲ್ಯ ಮಾಪನದೊಂದಿಗೆ ವಿದ್ಯಾರ್ಥಿನಿಯರು ಪ್ರಗತಿ ಗಮನಿಸಲಾಗುತ್ತಿದೆ.

ಒಟ್ಟಾರೆಯಾಗಿ ಎಲ್ಲಾ ಶಾಲಾ ಕಾರ್ಯ ಚಟುವಟಿಕೆಗಳು ಸುವ್ಯವಸ್ಥಿತವಾಗಿ ಪ್ರಾಂಶುಪಾಲರು, ನಿಲಯಪಾಲಕರು, ಬೋಧಕ ಮತ್ತು ಬೋಧಕೇತರ ಮಾರ್ಗದರ್ಶನದೊಂದಿಗೆ ಜರುಗಿಸಲಾಗುತ್ತಿದೆ ಶಾಲೆಯ ಸರ್ವಾಂಗೀಣ ಅಭಿವೃದ್ದಿಯತ್ತ ನಮ್ಮ ಶಾಲೆಯು ಧಾಪುಗಾಲು ಹಾಕುತ್ತಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ.ಬಿ.ಆರ್.ಅಂಬೇಡ್ಕರ ವಸತಿ ಶಾಲೆ

ನೇಸರಗಿ

ಮಂಜೂರಾದ ವರ್ಷ	2016–2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	
ನಿವೇಶನದ ವಿಸ್ತೀರ್ಣತೆ	2 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	–

ವಿವರಣೆ

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಹೆಸರಿನಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಹೋಬಳಿಯಾಗಿರುವ ನೇಸರಗಿ ಗ್ರಾಮದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರುರವರು ವಸತಿ ಶಾಲೆಯನ್ನು 2016–17 ಸಾಲಿನಲ್ಲಿ ಮಂಜೂರ ಮಾಡಿರುತ್ತಾರೆ. ಸದರಿ ವಸತಿ ಶಾಲೆಯನ್ನು 2017–18 ನೇ ಶೈಕ್ಷಣಿಕ ಸಾಲಿನಿಂದ 6 ನೇ ತರಗತಿಯಿಂದ ಪ್ರಾರಂಭ ಮಾಡಲಾಗಿರುತ್ತದೆ. ವಸತಿ ಶಾಲೆಗೆ ನಿವೇಶನ ಮಂಜೂರಾಗಿಲ್ಲದ ಕಾರಣ 2017–18 ನೇ ಸಾಲಿನಿಂದ ಇಲ್ಲಿಯವರೆಗೂ ನೇಸರಗಿಯಿಂದ 5 ಕಿ.ಮಿ ದೂರವಿರುವ ಬೆಳಗಾವಿ–ಬಾಗಲಕೋಟ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಕಲಕುಪ್ಪಿ ಗ್ರಾಮದ ಖಾಸಗಿ ತೋಟದ ಶಾಲೆಯಲ್ಲಿ ಬಾಡಿಗೆಯನ್ನು ಪಡೆದುಕೊಂಡು ವಸತಿ ಶಾಲೆಯನ್ನು ನಿರ್ವಹಿಸಿಕೊಂಡು ಬರಲಾಗುತ್ತಿದೆ.

ವಸತಿ ಶಾಲೆಯಲ್ಲಿ ಎಲ್ಲ ಜಾತಿ, ಧರ್ಮ, ಮತವೆಂಬ ವಿವಿಧತೆಯಿದ್ದರೂ ಏಕತೆಯಿಂದ ಶಿಕ್ಷಣ ಪಡೆಯುವುದು ಸರ್ವ ಸಮ್ಮತವೆಂಬ ಭಾವನೆಯಿಂದ ಎಲ್ಲ ವಿದ್ಯಾರ್ಥಿಗಳು ಒಗ್ಗಟ್ಟಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವಸತಿ ಶಾಲೆಯು ಬಡ ಪ್ರತಿಭಾವಂತ ಮಕ್ಕಳ ಕಲಿಕೆ ವಾತಾವರಣ ಕಲ್ಪಿಸಿದ್ದು ಉತ್ತಮವಾಗಿ ಪಠ್ಯ ಮತ್ತು ಪಠೇತರ ಚಟುವಟಿಕೆಳಲ್ಲಿ ಉತ್ತಮ ಸಾಧನೆಗೈಯುತ್ತ ಹೆಚ್ಚಿನ ಸಾಧನೆ ಮಾಡಲು ದಾಪುಗಾಲು ಹಾಕುತ್ತಿದೆ.

ವಸತಿ ಶಾಲೆಯು 2017–18 ನೇ ಶೈಕ್ಷಣಿಕ ಸಾಲಿನಲ್ಲಿ 6 ನೇ ತರಗತಿಯಲ್ಲಿ 50 ವಿದ್ಯಾರ್ಥಿಗಳು ದಾಖಲಾತಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ 36 ವಿದ್ಯಾರ್ಥಿಗಳು ಎ+ ಶ್ರೇಣಿಯಲ್ಲಿ ಹಾಗೂ 9 ವಿದ್ಯಾರ್ಥಿಗಳು ಎ ಶ್ರೇಣಿಯಲ್ಲಿ ಮತ್ತು 5 ವಿದ್ಯಾರ್ಥಿಗಳು ಬಿ+ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 2018–19 ನೇ ಶೈಕ್ಷಣಿಕ ಸಾಲಿನಲ್ಲಿ 100 ವಿದ್ಯಾರ್ಥಿಗಳು 6 & 7 ನೇ ತರಗತಿಗಳಲ್ಲಿ ದಾಖಲಾಗಿರುತ್ತಾರೆ. ಸದರಿ ವರ್ಷದಲ್ಲಿ 65 ವಿದ್ಯಾರ್ಥಿಗಳು ಎ+ ಶ್ರೇಣಿಯಲ್ಲಿ ಹಾಗೂ 14 ವಿದ್ಯಾರ್ಥಿಗಳು ಎ ಶ್ರೇಣಿಯಲ್ಲಿ ಮತ್ತು 21 ವಿದ್ಯಾರ್ಥಿಗಳು ಬಿ+ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ವಸತಿ ಶಾಲೆಯಲ್ಲಿ ಬೆಳಗ್ಗೆ 5:30 ಗಂಟೆಯಿಂದ ರಾತ್ರಿ 10:30 ಗಂಟೆಯವರೆಗೆ ವಸತಿ ಶಾಲೆಯ ದಿನಚರಿಯಂತೆ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಪಠ್ಯ ಮತ್ತು ಪಠೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆಗೆ ಉತ್ತಮವಾದ ಶೈಕ್ಷಣಿಕ ಪೂರಕವಾದ ಯೋಜನೆಗಳಿಂದ ಕಾರ್ಯಚಟುವಟಿಕೆಗಳನ್ನು ನೀಡಿ ಮಕ್ಕಳ ಶೈಕ್ಷಣಿಕ ಪ್ರಗತಿಯ ಶ್ರೇಯೊಭಿವೃದ್ಧಿಗೆ ಸಾಕಷ್ಟ ಅವಕಾಶ ಕಲ್ಪಿಸಲಾಗಿದೆ

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ॥ ಬಿ.ಆರ್.ಅಂಬೇಡ್ಕರ ವಸತಿ ಶಾಲೆ

ಕಾಕತಿ (ಪ.ಜಾ) ಮು/ಪೋ:ಕಾಕತಿ ತಾ/ಜಿ: ಬೆಳಗಾವಿ

ಮಂಜೂರಾದ ವರ್ಷ	29–05–2017
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	15.938566–74.524239
ನಿವೇಶನದ ವಿಸ್ತೀರ್ಣತೆ	–
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಸಿದ್ದೇಶ್ವರನ ಅಶೀರ್ವಾದದೊಂದಿಗೆ 2017 ರಲ್ಲಿ ಕರ್ನಾಟಕದ ಗಡಿನಾಡ ಆದ ಬೆಳಗಾವಿ ನಗರದಿಂದ 8 ಕಿ.ಮೀ ದೂರದಲ್ಲಿರುವ ವೀರರಾಣಿ ಕಿತ್ತೂರು ಚೆನ್ನಮ್ಮನ ಜನ್ಮಸ್ಥಳವಾದ ಕಾಕತಿಯಲ್ಲಿ ಡಾ॥ ಬಿ.ಆರ್.ಅಂಬೇಡ್ಕರ ವಸತಿ ಶಾಲೆ ಕಾಕತಿ ತಾಲ್ಲೂಕು: ಬೆಳಗಾವಿ ಜಿಲ್ಲೆ; ಬೆಳಗಾವಿ ವಸತಿ ಶಾಲೆಯು ಪ್ರಾರಂಭವಾಯಿತು.

ಮುಂಜಾನೆ 6:00 ಗಂಟೆಯ ಸೂರ್ಯೋದಯದಿಂದ ಪ್ರಾರಂಭವಾಗುವ ವಿದ್ಯಾರ್ಥಿಗಳ ದಿನಚರಿ ರಾತ್ರಿ 10:00 ಗಂಟೆಯ ತನಕ ನಿರಂತರವಾಗಿ ಸಾಗುತ್ತದೆ. ಬೆಳಗಿನ ತಣ್ಣಗಿನ ಪ್ರಕೃತಿಯಲ್ಲಿ ದೈಹಿಕ ಶಿಕ್ಷಕರ ಮಾರ್ಗದರ್ಶನದೊಂದಿಗೆ ಕೆಲವು ಸರಳ ವ್ಯಾಯಮಗಳು, ಯೋಗಾಸನ ಮತ್ತು ಪ್ರಾಣಾಯಾಮಗಳು ವಿದ್ಯಾರ್ಥಿಗಳಿಗೆ ಆಹ್ಲಾದವನ್ನು ಹಾಗೂ ಚೈತನ್ಯವನ್ನು ತುಂಬುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ , ಅವರ ಅರ್ಪಣಾ ಭಾವ, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಕಾನೂನು ಸಾಕ್ಷರತಾ ಸಂಘ, ಕ್ರೀಡಾ ಸಂಘಗಳ ಮೂಲಕ ವರ್ಷ ಪೂರ್ತಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿದೆ.

ನಮ್ಮ ಶಾಲೆಯ ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿ ಮತ್ತು ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕ್ರಸ್ಟರ ಮಟ್ಟದ, ವಿಭಾಗ ಮಟ್ಟದ, ತಾಲೂಕು ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ನಮ್ಮ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಯಾದ ಪವನ ರಾಠೋಡ ಇತನು ಎತ್ತರ ಜಿಗಿತದ ಸ್ಪರ್ಧೆಯಲ್ಲಿ ಭಾಗವಹಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾನೆ ಎಂಬುದು ಹೆಮ್ಮೆಯ ವಿಷಯವಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ॥ ಬಿ.ಆರ್. ಅಂಬೇಡ್ಕರ ಬಾಲಕಿಯರ ವಸತಿ ಶಾಲೆ

ಸುರೇಬಾನ ಹಾಲಿ ವಸತಿ ಕಟಕೋಳ ತಾ. ರಾಮದುರ್ಗ ಜಿ. ಬೆಳಗಾವಿ

ಮಂಜೂರಾದ ವರ್ಷ	2016–17
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ
ಅಕ್ಷಾಂಶ–ರೇಖಾಂಶ	15.98–75.14
ನಿವೇಶನದ ವಿಸ್ತೀರ್ಣತೆ	–
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಐತಿಹಾಸಿಕ ಹಿನ್ನಲೆಹೊಂದಿದ ಸ್ಥಳಗಳಲ್ಲಿ ಇದೂ ಒಂದು. ಅಷ್ಟೇ ಅಲ್ಲದೆ ರಾಮಾಯಣದಲ್ಲಿ ರಾಮನು ಪಾದಾರ್ಪಣೆ ಮಾಡಿದ ಪವಿತ್ರ ಸ್ಥಳವಾಗಿದೆ. ಸಾಕ್ಷಾತ್ ರಾಮನಿಗೊಸ್ಕರ ಶಬರಿ ಕಾಯ್ದುಕುಳಿತು ಹಣ್ಣು ನೀಡಿದ ಪುಣ್ಯಭೂಮಿಯಿದು. ಮಲ್ಲಪ್ರಭೆಯ ದಡದ ಸುಂದರ ನಿಸರ್ಗಧಾಮ ವಿದ್ಯಾರ್ಥಿಗಳನ್ನು ಜ್ಞಾನಾರ್ಜನೆಗಾಗಿ ಕೈಬಿಸಿ ಕರೆಯುತ್ತಿದೆ. ಡಾ॥ಬಿ.ಆರ್. ಅಂಬೇಡ್ಕರ ಬಾಲಕಿಯರ ವಸತಿ ಶಾಲೆ ಸುರೇಬಾನ.

ಸೂರ್ಯೋದಯದೊಂದಿಗೆ ವಿದ್ಯಾರ್ಥಿಗಳ ದಿನಚರಿ ಆರಂಭವಾಗಿ ರಾತ್ರಿ ಹತ್ತು ಗಂಟೆಯ ತನಕ ನಿರಂತರವಾಗಿ ಕಲಿಕೆ ಸಾಗುತ್ತದೆ. ಬೆಳಗಿನ ತಂಪಾದ ಪ್ರಕೃತಿಯ ಅಂಗಳದಲ್ಲಿ ದೈಹಿಕ ಶಿಕ್ಷಕರ ಮುಂದಾಳತ್ವದಲ್ಲಿ ಮಕ್ಕಳಿಗೆ ಸರಳ ವ್ಯಾಯಾಮಗಳು, ಯೋಗಾಸನ, ಪ್ರಾಣಾಯಾಮ ಇತ್ಯಾದಿ ಚಟುವಟಿಕೆ ನಡೆಸಿ ಮಕ್ಕಳಿಗೆ ಆಹ್ಲಾದಕರ ಚೈತನ್ಯವನ್ನು ತುಂಬುತ್ತಾರೆ.

ನಿಗದಿತ ತರಗತಿಗಳಲ್ಲದೆ ಮುಂಜಾನೆ ಮತ್ತು ಸಂಧ್ಯಾಕಾಲದಲ್ಲಿ ಶಿಕ್ಷಕರ ಮಾರ್ಗದರ್ಶನಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಭೋಧನೆ, ವಿಶೇಷ ತರಗತಿಗಳ ಮೂಲಕ ವಿದ್ಯಾರ್ಥಿಗಳ ದೈನಂದಿನ ಕಲಿಕೆ ಸಾಂಗವಾಗಿ ನಡೆಯುವಂತೆ ಕಾಳಜಿ ವಹಿಸಲಾಗುತ್ತದೆ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಮೂಲಕ ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಗಮನಿಸಲಾಗುತ್ತದೆ.

ಶಿಕ್ಷಕರ ಪರಿಣಾಮಕಾರಿ ಬೋಧನೆ, ಅವರ ಅರ್ಪಣಾಭಾವ ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿದೆ. ಇಲ್ಲಿರುವ ಭಾಷಾ ಸಂಘ, ಪರಿಸರ ಸಂಘ, ವಿಜ್ಞಾನ ಸಂಘ, ಆರೋಗ್ಯ ಸಂಘ, ಕಾನೂನು ಸುರಕ್ಷತಾ ಸಂಘ, ಕ್ರೀಡಾ ಸಂಘಗಳ ಮೂಲಕ ವರ್ಷ ಪೂರ್ತಿ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ದೆಗಳನ್ನು ಏರ್ಪಡಿಸುವ ಮೂಲಕ ಮಕ್ಕಳಲ್ಲಿ ನವಚೈತನ್ಯವನ್ನು ತುಂಬಲಾಗುತ್ತದೆ.

ವಲಯ ಮಟ್ಟದ ಕ್ರೀಡಾ ಸ್ಪರ್ದೆಯಲ್ಲಿ ಥ್ರೋ ಬಾಲ್ ಕ್ರಿಡೆಯಲ್ಲಿ ದ್ವಿತಿಯ ಸ್ಥಾನ, ರೀಲೆ ಆಟದಲ್ಲಿ ದ್ವಿತಿಯ ಸ್ಥಾನವನ್ನು ಪಡೆದಿದೆ. ಸಾಂಸ್ಕೃತಿಕ ವಿಭಾಗದಲ್ಲಿ ಭರತನಾಟ್ಯದಲ್ಲಿ ತಾಲೂಕ ಮಟ್ಟದಲ್ಲಿ ಪ್ರಥಮ ವಲಯ ಮಟ್ಟದಲ್ಲಿ ತೃತಿಯ ಸ್ಥಾನವನ್ನು ಪಡೆಯಲಾಗಿದೆ. ಹೀಗೆ ನಮ್ಮ ಶಾಲೆಯು ಸಹ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿದೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಡಾ॥ ಬಿ.ಆರ್.ಅಂಬೇಡ್ಕರ ವಸತಿ ಶಾಲೆ

ಜಾಧವ ಬಿಲ್ಡಿಂಗ ಹಳಿಯಾಳ ರೋಡ ಬೀಡಿ. ತಾ:ಖಾನಾಪೂರ ಜಿ:ಬೆಳಗಾವಿ ಪಿನ್ ಕೋಡ್: 591106

ಮಂಜೂರಾದ ವರ್ಷ	2016–17
ಶೈಕ್ಷಣಿಕ ಕಾರ್ಯಾರಂಭ ವರ್ಷ	2017–18
ಕಟ್ಟಡದ ಸ್ವರೂಪ	ಬಾಡಿಗೆ ಕಟ್ಟಡ
ಅಕ್ಷಾಂಶ–ರೇಖಾಂಶ	—
ನಿವೇಶನದ ವಿಸ್ತೀರ್ಣತೆ	—
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

18ನೇ ಶತಮಾನದ ಐತಿಹಾಸಿಕ ಹಿನ್ನಲೆಯ ಕಿತ್ತೂರು ಸಂಸ್ಥಾನಕ್ಕೆ ಸೇರಿದ ಕನ್ನಡ ನಾಡಿನ ಗಂಡುಗಲಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ನಡೆದಾಡಿದ ಪುಣ್ಯಭೂಮಿ ಬೀಡಿ. ಬೆಳಗಾವಿ ನಗರ ಮತ್ತು ಶಿರಶಿ,ಕಾರವಾರಗಳ ನಡುವಿನ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಪ್ರಕೃತಿಯ ಮಡಿನಲ್ಲಿ ಡಾ॥ ಬಿ.ಆರ್.ಅಂಬೇಡ್ಕರ ವಸತಿ ಶಾಲೆ ಬೀಡಿ ಇದೆ.

ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಬೀಡಿ ಹೋಬಳಿಯ ಬೀಡಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಬೀಡಿ ಗ್ರಾಮದಲ್ಲಿನ ಬಾಡಿಗೆ ಕಟ್ಟಡದಲ್ಲಿ ಜಿಲ್ಲೆಯ ವಿವಿಧ ಜಾತಿ,ಮತ,ಧರ್ಮಗಳಿಗೆ ಸೇರಿದ ಮಕ್ಕಳ ಪಾಲಿಗೆ ಜ್ಞಾನ ದೇಗುಲವಾಗಿದೆ.

ಪ್ರತಿ ವರ್ಷ ನಡೆಯುವ ಕೇಂದ್ರ ,ವಲಯ ,ತಾಲೂಕಾ ಹಾಗೂ ಜಿಲ್ಲಾ ಹಂತದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ಉತ್ತಮ ಪೈಪೋಟಿಯನ್ನು ನೀಡುವುದರ ಮೂಲಕ ಹಾಗೂ ಪ್ರತಿಭಾ ಕಾರಂಜಿಯ ಎಲ್ಲ ಹಂತಗಳ ಸ್ಪರ್ಧೆಗಳಲ್ಲೂ ಭಾಗವಹಿಸಿ ಅಲ್ಲಿಯೂ ಕೂಡ ಉತ್ತಮ ಸ್ಥಾನಗಳನ್ನು ಪಡೆಯುವುದರ ಮೂಲಕ ಶಾಲೆ ಎಲ್ಲರಿಗೂ ಚಿರಪರಿಚಿತವಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇದರಡಿಯಲ್ಲಿ ನಡೆಸಲ್ಪಡುವ 818 ವಸತಿ ಶಾಲೆಗಳಲ್ಲಿ 791ನೇಯ ಶಾಲೆಯಾಗಿರುತ್ತದೆ.

ಬೆಳಿಗ್ಗೆ ಮತ್ತ ಸಂಜೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವಯಂ ಅಧ್ಯಯನಕ್ಕಾಗಿ ಸಮಯವನ್ನು ಮೀಸಲಿಡಲಾಗಿದೆ. ವಿದ್ಯಾರ್ಥಿಗಳಿಗೆ ಚಟುವಟಿಕೆ ಆಧಾರಿತ ಪಾಠ ಬೋಧನೆ ಮಾಡುವುದರ ಮೂಲಕ ಮಕ್ಕಳಲ್ಲಿ ಕ್ರಿಯಾಶೀಲತೆಯನ್ನು ಬೆಳೆಸುವುದರಲ್ಲಿ ಸಿಬ್ಬಂದಿಗಳ ಪಾತ್ರ ಪ್ರಮುಖವಾಗಿದೆ. ಮುಂದಿನ 2ವರ್ಷಗಳ ನಂತರ ಎದುರಾಗುವ 10 ನೇ ತರಗತಿಯ ಉತ್ತಮ ಫಲಿತಾಂಶ ನೀಡುವ ಪಥದಲ್ಲಿ ಎಲ್ಲ ಸಿಬ್ಬಂದಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಿದ್ದಾರೆ.

ಒಟ್ಟಾರೆಯಾಗಿ ನಮ್ಮ ಶಾಲೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೂ ಸಹ ರಾಜ್ಯದಲ್ಲಿಯೇ ಉತ್ತಮ ಶಾಲೆಯೆಂಬ ಕೀರ್ತಿ ತರಲು ವಿದ್ಯಾರ್ಥಿಗಳೊಂದಿಗೆ ಎಲ್ಲ ಸಿಬ್ಬಂದಿಗಳು ಪ್ರಯತ್ನಿಸುತ್ತಿದ್ದೇವೆ.

ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ

ಮೊರಾರ್ಜಿ ದೇಸಾಯಿ ವಸತಿ ಶಾಲೆ

ನಿಡಸೋಸಿ–920, ತಾಲ್ಲೂಕ॥ ಹುಕ್ಕೇರಿ, ಜಿಲ್ಲಾ॥ ಬೆಳಗಾವಿ,ಪಿನ.ನಂ–591236.

ಮಂಜೂರಾದ ವರ್ಷ	1996–1997
ಶೈಕ್ಷಣಿಕ ಕಾರ್ಯಾರಂಭ ವರ್ಷ	1997–98
ಕಟ್ಟಡದ ಸ್ವರೂಪ	ಸ್ವಂತ
ಅಕ್ಷಾಂಶ–ರೇಖಾಂಶ	16.30–74.52
ನಿವೇಶನದ ವಿಸ್ತೀರ್ಣತೆ	14.5 ಎಕರೆ
ಪ್ರವೇಶ ಮಂಜೂರಾತಿ ಸಂಖ್ಯೆ	250

ವಿವರಣೆ

ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರವಾದ ನಿಡಸೋಸಿಯ ಪತ್ರಿವನ ಪಕ್ಕದಲ್ಲಿರುವ ಶಾಂತವಾದ ಹಾಗೂ ಸುಂದರವಾದ ಸ್ಥಳದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿಡಸೋಸಿ (215 ಎಸ್.ಸಿ) ಶಾಲೆಯು ತಾಲ್ಲೂಕಾ ಹುಕ್ಕೇರಿಯಿಂದ 15 ಕೀ.ಮೀಟರ ಅಂತರದಲ್ಲಿರುವ ನಿಡಸೋಸಿ ಗ್ರಾಮದಲ್ಲಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಹೋಬಳಿಯಿಂದ 10 ಕೀ. ಮೀಟರ ಅಂತರದಲ್ಲಿದ್ದು, 14.5 ಎಕರೆ ಆವರಣವನ್ನು ಹೊಂದಿರುವ ಶಾಲೆಯು ಗ್ರಾಮೀಣ ಭಾಗದ ಪ್ರತಿಭಾವಂತ ಬಡ ಮಕ್ಕಳಿಗೆ ಉತ್ತಮ ಗುಣ ಮಟ್ಟದ ಶಿಕ್ಷಣವನ್ನು ನೀಡುವ ಶಾಲೆಯಾಗಿದೆ. ಶಾಲೆಯಲ್ಲಿ ವಿಶಾಲವಾದ ಆಟದ ಮೈದಾನ, ಜಿಮ್ಮ ವ್ಯವಸ್ಥೆ ಕಂಪ್ಯೂಟರ ಶಿಕ್ಷಣ ಕೊಠಡಿ, ಮತ್ತು ಸ್ಮಾರ್ಟ್‌ಕ್ಲಾಸ್ ವ್ಯವಸ್ಥೆ ಹೊಂದಿರುವ ವರ್ಗ ಕೋಣೆಗಳು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿವೆ.

ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 11 ಜನ ಸಿಬ್ಬಂದಿಗಳಲ್ಲಿ 8 ಜನ ಬೋಧಕ ಹಾಗೂ 3 ಬೋಧಕೇತರ ಸಿಬ್ಬಂದಿಗಳು ಇದ್ದು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಇಲ್ಲಿಯವರೆಗೆ ವಸತಿ ಶಾಲೆಯಿಂದ 18 ಎಸ್.ಎಸ್.ಎಲ್.ಸಿ ಬ್ಯಾಚ್‌ಗಳು ಮುಗಿದಿದ್ದು, ಅದರಲ್ಲಿ 13 ಬ್ಯಾಚಗಳು ಶೇಕಡಾ 100 ಪ್ರತಿಶತ ಹೊಂದಿರುತ್ತಾರೆ, 2019–20ನೇ ಶೈಕ್ಷಣಿಕ ವರ್ಷದಲ್ಲಿ ಕುಮಾರ ಅಮರ ಕುರಬೆಟ ಇತನು ಅಂಗವಿಕಲರ ಕ್ರೀಡಾಕೂಟದಲ್ಲಿ ಭಲೇ ಎಸೆತ ವಿಭಾಗದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.